# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮೇ 15, 2024

ಸಂಪುಟ : 51 ಸಂಚಿಕೆ : 01 ☎ 08192-254736 91642 99999 RNI No: 27369/75 ಪುಟ : 6 ರೂ : 5.00 www.janathavani.com janathavani@mac.com




# ಕಂಪನಿಗಳ ಕಲ್ಮಷ ನೀರು ರೈತರ ಜಮೀನಿಗೆ ಕ್ರಮ ಕೈಗೊಳ್ಳದಿದ್ದರೆ ಬೀಗ ಜಡಿದು ಹೋರಾಟ

## ಗ್ರಾಮಸ್ಥರ ಪ್ರತಿಭಟನೆಯಲ್ಲಿ ರೈತ ಮುಖಂಡ ರವೀಂದ್ರಗೌಡ ಪಾಟೀಲ ಎಚ್ಚರಿಕೆ





ರಾಣೇಬೆನ್ನೂರು, ಮೇ 14 -ತಾಲ್ಲೂಕಿನ ಹನುಮನ ಹಳ್ಳಿ ಹತ್ತಿರ ಬೃಹದಾಕಾರದಲ್ಲಿ ನಿರ್ಮಾಣ ಗೊಂಡಿರುವ ಎರಡು ಕಂಪನಿಗಳು ಹೊರಸೂಸುವ ರಾಸಾಯನಿಕ ಕಲ್ಮಷಯುಕ್ತ ನೀರಿನಿಂದ ರೈತರು ಆತಂಕಕ್ಕೀಡಾಗಿದ್ದಾರೆ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ದೂರಿದ್ದಾರೆ.

ನೀರನ್ನು ಕಂಪನಿಯವರು ನೇರವಾಗಿ ಪಕ್ಕದಲ್ಲಿರುವ ದೊಡ್ಡ ಹಳ್ಳಕ್ಕೆ ಬಿಡುವುದರಿಂದ ಹಳ್ಳದ ಮುಖಾಂತರ ನೀರು ಪಕ್ಕದ ಕುಮದ್ವತಿ ಮತ್ತು ತುಂಗಭದ್ರಾ ನದಿಗಳನ್ನು ಸೇರುವುದರಿಂದ ರೈತರು ಹಳ್ಳ ಮತ್ತು ನದಿಯ ನೀರನ್ನು ತಮ್ಮ ಹೊಲಗಳಿಗೆ ಹಾಯಿಸುತ್ತಾರೆ. ಈ ರಾಸಾಯನಿಕಯುಕ್ತ ನೀರಿನಿಂದ ರೈತರ ಫಲವತ್ತಾದ ಕೃಷಿ ಭೂಮಿ ಬರಡಾಗುತ್ತಿರುವ ಬಗ್ಗೆ ರೈತರಿಗೆ ಆತಂಕ ಒಂದು ಕಡೆಯಾದರೆ, ಈ ದುರ್ವಾಸನೆಯುಳ್ಳ ನೀರಿನಿಂದ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವ ಎಲ್ಲಾ ಲಕ್ಷ್ಮಣಗಳು ಕಂಡು ಬರುತ್ತಿದ್ದು ಕೃಷಿಕರು, ಕೃಷಿ ಕಾರ್ಮಿಕರು ದುರ್ವಾಸನೆಗೆ ಹೆದರಿ ಕೃಷಿ ಚಟುವಟಿಕೆಯನ್ನೇ ಬಿಟ್ಟು ಗುಳೇ ಹೋಗುವ ವಾತಾವರಣ ನಿರ್ಮಾಣವಾಗಿದೆ.

ಹಾಗಾಗಿ ಯಾವುದೇ ಸಾಧಕ, ಬಾಧಕಗಳನ್ನು ತಿಳಿದುಕೊಳ್ಳದೇ ಇಂತಹ ಅಪಾಯಕಾರಿ ಕಂಪನಿಗಳನ್ನು ಇಲ್ಲಿ ಸ್ಥಾಪನೆ ಮಾಡಲಿಕ್ಕೆ ಅನುಮತಿ ನೀಡಿರುವ ಸರ್ಕಾರ ಮತ್ತು ಜಿಲ್ಲಾಡಳಿತದ ನಿರ್ಲಕ್ಷ್ಯ ಮತ್ತು ಕರ್ತವ್ಯ ಲೋಪವೇ ಇದಕ್ಕೆ ಕಾರಣ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕಂಪನಿಗಳ ಆಸುಪಾಸಿನ ಹನುಮನಹಳ್ಳಿ, ಮುದೇನೂರು, ಮಲಕನಹಳ್ಳಿ, ಕೃಷ್ಣಾಪುರ, ಮುಷ್ಟೂರು, ಹೊಳೆನ್ವೇರಿ ತೆರೇದಹಳ್ಳಿ, ನಾಗೇನಹಳ್ಳಿ ಗ್ರಾಮಗಳ ಗ್ರಾಮಸ್ಥರು ನಡೆಸುತ್ತಿದ್ದ ಪ್ರತಿಭಟನೆಯ ನೇತೃತ್ವ ವಹಿಸಿ ಅವರು ಮಾತನಾಡಿದರು.

ಸರ್ಕಾರ ಮತ್ತು ಜಿಲ್ಲಾಡಳಿತ ಪರಿಸರ ಮತ್ತು ವಾಯುಮಾಲಿನ್ಯ ನಿಯಂತ್ರಣ ಮಂಡಳಿಗಳು ಈ ಕೂಡಲೇ ಈ ಬಗ್ಗೆ ತುರ್ತುಕ್ರಮ ಜರುಗಿಸಿ, ಕಂಪನಿಯವರ ಮೇಲೆ ಶಿಸ್ತು ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು. ಭೀಕರ ಬರಗಾಲದ ಮಧ್ಯೆ ರೈತರು ವಿಲಿವಿಲಿ ಒದ್ದಾಡುತ್ತಾ, ಆತ್ಮಹತ್ಯೆಯ ದಾರಿ ಹಿಡಿಯುತ್ತಿರುವುದಕ್ಕೆ ಇಂಥ ಎಡಬಿಡಂಗಿ ಯೋಜನೆಗಳೂ ಕೂಡ ಕಾರಣವಾಗಿವೆ ಎಂದು ಟೀಕಿಸಿರುವ ಪಾಟೀಲರು, ವಾರದೊಳಗೆ ಸಮಸ್ಯೆ ಬಗೆಹರಿಸದಿದ್ದರೆ ಕಾರ್ಖಾನೆಗೆ ಬೀಗ ಜಡಿದು ನ್ಯಾಯಕ್ಕಾಗಿ ಹೋರಾಡಲಾಗುವುದೆಂದು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಅಧ್ಯಕ್ಷರಾದ ರೇಖಾ ಮಂಜಪ್ಪ ಪುಟ್ಟಕ್ಕನವರ, ರೈತ ಮುಖಂಡರಾದ ವಾಗೀಶ ದೊಡ್ಡಮನಿ, ಹರಿಹರಗೌಡ ಪಾಟೀಲ, ಬಸವರಾಜ ಯಲ್ಲಕ್ಕನವರ, ಮನ್ಮಥ ಎಸ್. ಕರಿಯಜ್ಜರ, ಉಲ್ಲಾಸ ಹಿರೇಮಠ ಮುಂತಾದವರು ಭಾಗವಹಿಸಿದ್ದರು.

## ಪ್ರಥಮ ವರ್ಷದ ಡಿಪ್ಲೋಮ ಪ್ರವೇಶಕ್ಕೆ ಮೆರಿಟ್ ಆಧಾರಿತ ಆನ್‌ಲೈನ್ ಅರ್ಜಿ

ದಾವಣಗೆರೆ, ಮೇ 14 - ಪ್ರಸಕ್ತ ಸಾಲಿನಲ್ಲಿ ದಾಗಿನಕಟ್ಟೆ ಶ್ರೀ ಕೆಂಗಪ್ಪ ನಾಯಕ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಪ್ರಥಮ ವರ್ಷದ ಡಿಪ್ಲೋಮ ಪ್ರವೇಶಕ್ಕೆ ಮೆರಿಟ್ ಆಧಾರಿತ ಆನ್‌ಲೈನ್ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕನಿಷ್ಠ ಶೇ.35 ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು HYPERLINK "http://www.dtek.kar.nic.in/" \t "_blank" www.dtek.kar.nic.in ವೆಬ್‌ಸೈಟ್ ಮೂಲಕ ಅರ್ಜಿ ಪಡೆದು, ಅಗತ್ಯ ದಾಖಲಾತಿಗಳೊಂದಿಗೆ ಇದೇ ದಿನಾಂಕ ಮೇ 21 ರೊಳಗಾಗಿ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಶ್ರೀ ಕೆಂಗಪ್ಪ ನಾಯಕ ಸರ್ಕಾರಿ ಪಾಲಿಟೆಕ್ನಿಕ್ ದಾಗಿನಕಟ್ಟೆ ಇವರನ್ನು ಅಥವಾ ದೂ. ಸಂ : 9448414180, 9844197172, 8861360348 ಗೆ ಸಂಪರ್ಕಿಸಲು ಕೋರಲಾಗಿದೆ.

# ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರ ಕಲಿಸಬೇಕು

## ಪೋಷಕರಿಗೆ ಹಿರೇಕಲ್ಮಠದ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಕಿವಿಮಾತು



ಹೊನ್ನಾಳಿ, ಮೇ 14 - ನಿಮ್ಮ ಮಕ್ಕಳ ಭವಿಷ್ಯ ನಿಮ್ಮ ಕೈಯ್ಯಲ್ಲಿಯೇ ಇದ್ದು ಪೋಷಕರು ಜಾಗೃತೆಯಿಂದ ಮಕ್ಕಳ ಲಾಲನೆ-ಪೋಷಣೆ ಮಾಡಬೇಕು ಎಂದು ಹಿರೇಕಲ್ಮಠದ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಪೋಷಕರಿಗೆ ಕಿವಿ ಮಾತು ಹೇಳಿದರು.

ಹಿರೇಕಲ್ಮಠದಲ್ಲಿ ಅಕ್ಷಯ ತೃತೀಯ ಅಮಾವಾಸ್ಯೆ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಶ್ರೀ ಗುರು ಚನ್ನೇಶ್ವರ ಬೆಳ್ಳಿ ರಥೋತ್ಸವ ಮತ್ತು ಸಂಸ್ಕೃತಿ-ಸಂಸ್ಕಾರ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಮಗು 6 ತಿಂಗಳಿದ್ದಾಗಿನಿಂದಲೇ ಪೋಷಕರು ಮಕ್ಕಳ ಕೈಯ್ಯಲ್ಲಿ ಮೊಬೈಲ್ ನೀಡುತ್ತಾ ಮಗುವನ್ನು ಮೊಬೈಲ್‌ಗೆ ದಾಸನಾಗುವಂತೆ ಮಾಡುತ್ತಾ ಮಗುವಿನ ಮೇಲೆ ದುಷ್ಪರಿಣಾಮವುಂಟಾಗಲು ಪೋಷಕರೇ ನೇರ ಕಾರಣರಾಗುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರತೀ ಅಮಾವಾಸ್ಯೆಯಂದು ಹಿರೇಕಲ್ಮಠದಲ್ಲಿ ಸಂಸ್ಕೃತಿ, ಸಂಸ್ಕಾರ ಕಾರ್ಯಕ್ರಮದ ಮೂಲಕ ಮಕ್ಕಳಲ್ಲಿ ನಮ್ಮ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದ್ದು, ಎಲ್ಲಾ ಪೋಷಕರು ತಮ್ಮ ಮಕ್ಕಳನ್ನು ಕರೆ ತರಬೇಕು. ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸಲು ಸೂಕ್ತ ವೇದಿಕೆಯನ್ನು ಒದಗಿಸಿ ಕೊಡಲಾಗುತ್ತಿದ್ದು, ಎಲ್ಲರೂ ಇದರ ಸದ್ಬಳಕೆ ಮಾಡಿಕೊಳ್ಳುವಂತೆ ಕರೆ ನೀಡಿದರು. ಹಾಗೆಯೇ ತಮ್ಮ ಮಕ್ಕಳ ಹುಟ್ಟುಹಬ್ಬವನ್ನು ಇಲ್ಲಿಯೇ ಆಚರಿಸಿಕೊಳ್ಳಲು ವೇದಿಕೆಯನ್ನು ಕಲ್ಪಿಸಿಕೊಡಲಾಗುವುದು ಎಂದು ತಿಳಿಸಿದರು.

ಸಾಹಿತಿ ಯು.ಎನ್. ಸಂಗನಾಳಮಠ ಮಾತನಾಡಿ, ಬಸವಣ್ಣನವರು ವೀರಶೈವ ಧರ್ಮದ ಪುನರುದ್ಧಾರ ಮಾಡಿದಂತಹ ಮಹಾನ್ ವ್ಯಕ್ತಿಯೆಂದು ಬಣ್ಣಿಸಿದರು. ಕನ್ನಡವನ್ನು ಸಂವಹನ ಭಾಷೆಯನ್ನಾಗಿ ಮಾಡಿದ ಕೀರ್ತಿಯು ಬಸವಣ್ಣನವರಿಗೆ ಸಲ್ಲುತ್ತದೆ. 1913ರಲ್ಲಿಯೇ ದಾವಣಗೆರೆಯ ವಿರಕ್ತ ಮಠದಲ್ಲಿ ಮೃತ್ಯುಂಜಯ ಸ್ವಾಮಿಗಳ ನೇತೃತ್ವದಲ್ಲಿ ಹರ್ಡೇಕರ್ ಮಂಜಪ್ಪನವರು ಬಸವಣ್ಣನ ಜಯಂತಿಯನ್ನು ಆಚರಿಸಿದ್ದರು ಎಂದು ಮಾಹಿತಿ ನೀಡಿದರು.

ಬಸವಾದಿ ಶರಣರ ಜೀವನಾದರ್ಶಗಳನ್ನು ಪ್ರತಿಯೊಬ್ಬರೂ ಪಾಲಿಸಿದಾಗ ಮಾತ್ರವೇ ಬಸವ ಜಯಂತಿ ಸೇರಿದಂತೆ, ಇತರೆ, ಮಹಾನ್ ವ್ಯಕ್ತಿಗಳ ಜಯಂತಿಯನ್ನು ಆಚರಣೆ ಮಾಡಿದ್ದಕ್ಕೂ ಸಾರ್ಥಕ್ಯ ಸಿಗಲಿದೆ ಎಂದು ಬಸವಣ್ಣನವರ ಜೀವನ ವೃತ್ತಾಂತವನ್ನು ವಿವರಿಸಿದರು.

ಚನ್ನೇಶ್ವರ ಗಾನ ಕಲಾ ಬಳಗ ಮತ್ತು ಸಂಸ್ಕೃತಿ-ಸಂಸ್ಕಾರ ತಂಡದ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನಸೂರೆಗೊಂಡವು.

ಧಾರ್ಮಿಕ ಸಭೆಯಲ್ಲಿ ಪ್ರಧಾನ ಅರ್ಚಕ ಅನ್ನದಾನಯ್ಯ ಶಾಸ್ತ್ರಿ, ನಿಜಗುಣ ಶಾಸ್ತ್ರಿ, ಹರಳಹಳ್ಳಿ ಶೇಖರಪ್ಪ, ಕಡದಕಟ್ಟೆ ದಾನಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಎನ್.ಇ. ನಟರಾಜ್ ನಾಮಪತ್ರ ಸಲ್ಲಿಕೆ



ದಾವಣಗೆರೆ, ಮೇ 14 -ಕರ್ನಾಟಕ ರಾಜ್ಯ ವಿಧಾನ ಪರಿಷತ್ತಿನ ಆಗ್ನೇಯ ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ನಿಕಟಪೂರ್ವ ರಾಜ್ಯಾಧ್ಯಕ್ಷರೂ, ಕರ್ನಾಟಕ ರಾಜ್ಯ ವೀರಶೈವ ಲಿಂಗಾಯಿತ ನೌಕರರ ಕ್ಷೇಮಾಭಿವೃದ್ಧಿ ಸಂಘದ ನಿಕಟಪೂರ್ವ ಸಂಘದ ಅಧ್ಯಕ್ಷರೂ ಆದ ಎನ್.ಈ. ನಟರಾಜ ಅವರು ಬೆಂಗಳೂರಿನ ಪ್ರಾದೇಶಿಕ ಆಯುಕ್ತರಿಗೆ ನಾಮಪತ್ರ ಸಲ್ಲಿಸಿದರು.


## ಹರಪನಹಳ್ಳಿ : ಕೆ.ಸಿ.ಸಾಗರ್‌ಗೆ ವಾಲ್ಮೀಕಿ ಮುಖಂಡರಿಂದ ಸನ್ಮಾನ



ಹರಪನಹಳ್ಳಿ, ಮೇ 14 - ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತಾಲ್ಲೂಕಿಗೆ ಪ್ರಥಮ ಹಾಗೂ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದ ಕೆ.ಸಿ. ಸಾಗರ್‌ಗೆ ತಾಲ್ಲೂಕು ವಾಲ್ಮೀಕಿ ಸಮುದಾಯದ ಮುಖಂಡರು ಮನೆಗೆ ತೆರಳಿ ಸನ್ಮಾನಿಸಿದರು.

ಈ ವೇಳೆ ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವೈ.ಡಿ. ಅಣ್ಣಪ್ಪ, ಮುಖಂಡರಾದ ಎಚ್.ಕೆ. ಹಾಲೇಶ್, ಗಿಡ್ಡಹಳ್ಳಿ ನಾಗರಾಜ, ಚಿರಸ್ತಹಳ್ಳಿ ಮರಿಯಪ್ಪ, ಶಿರಹಟ್ಟಿ ದಂಡೆಪ್ಪ, ಎಚ್.ಕೆ. ಮಂಜುನಾಥ, ರೇವಣಸಿದ್ದಪ್ಪ, ಪಟ್ನಾಮದ ಪರಶುರಾಮ, ದೊಡ್ಡ ರಾಮಣ್ಣ, ಕೆ.ಲಕ್ಷ್ಮಿ ಚಂದ್ರಶೇಖರ್, ಕಣಿವಿಹಳ್ಳಿ ಕೆ.ರಾಜಪ್ಪ ಸೇರಿದಂತೆ ಇತರರು ಇದ್ದರು.

## ನಿಟ್ಟೂರಿನಲ್ಲಿ ಸಂಭ್ರಮದ ಉತ್ಸವ



ಮಲೇಬೆನ್ನೂರು, ಮೇ 14- ನಿಟ್ಟೂರು ಗ್ರಾಮದಲ್ಲಿ 16 ವರ್ಷಗಳ ನಂತರ ಜರುಗಿದ ಗ್ರಾಮದೇವತೆ ಶ್ರೀ ಮಾರಿಕಾಂಬದೇವಿ ಜಾತ್ರೆಯ ಅಂಗವಾಗಿ ಮಂಗಳವಾರ ರಾತ್ರಿ ದೇವಿಯ ಮೆರವಣಿಗೆ ವೈಭವದೊಂದಿಗೆ ನಡೆಯಿತು.

ದೇವಿಯ ಉತ್ಸವ ಮೂರ್ತಿಯನ್ನು ಅಲಂಕಾರ ಮಾಡಿದ ಟ್ರ್ಯಾಕ್ಟರ್‌ನಲ್ಲಿ ಪ್ರತಿಷ್ಠಾಪಿಸಿ, ಗ್ರಾಮದ ರಾಜ ಬೀದಿಗಳಲ್ಲಿ ಸಕಲ ವಾದ್ಯಗಳೊಂದಿಗೆ ಮಂಗಳವಾರ ರಾತ್ರಿ ಆರಂಭವಾದ ಮೆರವಣಿಗೆ ಬುಧವಾರ ಬೆಳಗಿನ ಜಾವದವರೆಗೂ ನಡೆಯಿತು. ನಂತರ ಘಟೆ ತಂದು ಹಿಟ್ಟಿನ ಕೋಣದ ಬಲಿ ಕೊಡಲಾಗುವುದು. ಬುಧವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ವಿವಿಧ ಹರಕೆ, ಸೇವೆಗಳು ಭಕ್ತರಿಂದ ನೆರವೇರಲಿವೆ. ಹಬ್ಬಕ್ಕಾಗಿ ಬಂಧು-ಮಿತ್ರರು ಈಗಾಗಲೇ ಗ್ರಾಮಕ್ಕೆ ಆಗಮಿಸಿದ್ದು, ಬುಧವಾರ ಸಂಜೆ ಗ್ರಾಮದ ಮಾಂಸಹಾರಿಗಳ ಮನೆಗಳಲ್ಲಿ ಬಾಡೂಟ ಜೋರಾಗಿರುತ್ತದೆ.

## ಲಲಿತಾ ಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಮೇ 14 - ನಗರದ ಲಲಿತಾ ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲ್ ವಸತಿಯುತ ಶಾಲೆಗೆ ಶೇ. 100 ರಷ್ಟು ಫಲಿತಾಂಶ ಲಭಿಸಿದೆ. ಬಿ. ಪ್ರೇಮಾ, ವಿದ್ಯಾರ್ಥಿನಿಯು 455 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಹಾಗೆಯೇ ಕೆ. ಎಸ್. ಪ್ರಜ್ವಲ್ 444, ಜಿ.ಸಿ. ನಯನ 437, ಎಂ. ಚೈತನ್ಯ 413, ವಿ. ಚಿನ್ಮಯಿ 408, ಅಂಕಗಳನ್ನು ಗಳಿಸಿದ್ದಾರೆ. 10 ವಿದ್ಯಾರ್ಥಿಗಳ ಡಿಸ್ಟಿಂಕ್ಷನ್, 31 ವಿದ್ಯಾರ್ಥಿಗಳ ಪ್ರಥಮ ದರ್ಜೆ, 17 ವಿದ್ಯಾರ್ಥಿಗಳ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷರಾದ ಶಶಿಕಲಾ ಇ.ಆರ್ ಕಾರ್ಯದರ್ಶಿ ಡಾ. ಎಂ.ಇ. ರವಿರಾಜ ಅಭಿನಂದಿಸಿದ್ದಾರೆ.

## ಹೊನ್ನಾಳಿಯಲ್ಲಿ ಇಂದು ರಥೋತ್ಸವ

ಪಟ್ಟಣದ ಬನ್ನಿಮಹಾಂಕಾಳಿ ದೇವಸ್ಥಾನದಲ್ಲಿಂದು ಬೆಳ್ಳಗ್ಗೆ 9 ಗಂಟೆಗೆ 8 ನೇ ವರ್ಷದ ಬನ್ನಿ ಮಹಾಂಕಾಳಿ ರಥೋತ್ಸವ ನಡೆಯಲಿದೆ.

## ಕುಣೆಬೆಳಕೆರೆಯಲ್ಲಿ ಇಂದು ಬೀರಲಿಂಗೇಶ್ವರ ಸಮುದಾಯ ಭವನ ಲೋಕಾರ್ಪಣೆ



ಮಲೇಬೆನ್ನೂರು ಸಮೀಪದ ಕುಣೆಬೆಳಕೆರೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಬೀರಲಿಂಗೇಶ್ವರ ಬೃಹತ್ ಸಮುದಾಯ ಭವನ ಲೋಕಾರ್ಪಣೆ ಮತ್ತು ಶ್ರೀ ಗಣಪತಿ, ಶ್ರೀ ರೇವಣಸಿದ್ದೇಶ್ವರ, ಶ್ರೀ ಆಂಜನೇಯ ಸ್ವಾಮಿ ನೂತನ ಶಿಲಾಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಗಳು ಇಂದು ನಡೆಯಲಿವೆ ಎಂದು ಗ್ರಾಮದ ಜಿ.ಸಿ.ರುದ್ರಪ್ಪ ತಿಳಿಸಿದ್ದಾರೆ.

ಇಂದು ಬ್ರಾಹ್ಮೀ ಮುಹೂರ್ತದಲ್ಲಿ ನೂತನ ಸಮುದಾಯ ಭವನದ ಪ್ರಾರಂಭೋತ್ಸವ ಪೂಜೆ ಮತ್ತು ನೂತನ ಶಿಲಾಮೂರ್ತಿಗಳ ಪ್ರಾಣ ಪ್ರತಿಷ್ಠಾಪನೆ ನೆರವೇರಲಿದ್ದು, ಬೆಳಿಗ್ಗೆ 11 ಗಂಟೆಗೆ ಕಾಗಿನೆಲೆ ಕನಕ ಗುರುಪೀಠದ ಹೊಸದುರ್ಗ ಶಾಖಾಮಠದ ಶ್ರೀ ಈಶ್ವರಾನಂದ ಪುರಿ ಸ್ವಾಮೀಜಿ ಅವರಿಂದ ಆಶೀರ್ವಚನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

## ಬಸವ ಜಯಂತಿ ಅಂಗವಾಗಿ ಮಜ್ಜಿಗೆ ವಿತರಣೆ



ದಾವಣಗೆರೆ, ಮೇ 14 - ಜಾಗತಿಕ ಲಿಂಗಾಯತ ಮಹಾಸಭಾ, ಶರಣ ಸಾಹಿತ್ಯ ಪರಿಷತ್, ಬಸವ ಬಳಗ ಮತ್ತು ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಶುಕ್ರವಾರ ಬಸವ ಜಯಂತಿ ಅಂಗವಾಗಿ ಬೆಳಗ್ಗೆ 11ರಿಂದ ಮಧ್ಯಾಹ್ನ 2ರ ವರೆಗೆ ಉಚಿತವಾಗಿ ಮಜ್ಜಿಗೆ ವಿತರಿಸಲಾಯಿತು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪಿ.ಬಿ. ಪರಮೇಶ್ವರಪ್ಪ, ಅಜಯ್ ಕುಮಾರ್, ಜಾಗತಿಕ ಲಿಂಗಾಯತ ಮಹಾಸಭೆಯ ಬಸವನಾಳು ಮರುಳಸಿದ್ದಯ್ಯ, ಬಸವ ಬಳಗದ ಕಾರ್ಯದರ್ಶಿ ವೀಣಾ ಮಂಜುನಾಥ್, ಆವರಗೆರೆ ರುದ್ರಮುನಿ, ಶಿವಯೋಗಿ, ಶಿವನಕೆರೆ ಬಸವಲಿಂಗಪ್ಪ, ಮಂಜುಳಾ ಬಸವಲಿಂಗಪ್ಪ ಮತ್ತಿತರರಿದ್ದರು.

## ಹೊನ್ನಾಳಿ : ಇಂದು ಕಾನೂನು ಅರಿವು

ಪುರಸಭೆ ಆವರಣದಲ್ಲಿ ಇಂದು 9.30ಕ್ಕೆ ಪೌರ ಕಾರ್ಮಿಕರಿಗಾಗಿ ಕಾರ್ಮಿಕ ಇಲಾಖೆ ತಾಲ್ಲೂಕು ನ್ಯಾಯಾಲಯದ ಆಶ್ರಯದಲ್ಲಿ ಕಾರ್ಮಿಕ ದಿನಾಚರಣೆ ಅಂಗವಾಗಿ ಕಾನೂನು ಅರಿವು ಕಾರ್ಯಕ್ರಮ ನಡೆಯಲಿದೆ.

## ಮಲೇಬೆನ್ನೂರಿನ ಬ್ರಹ್ಮಾಕುಮಾರಿ ಮಂಜುಳಾಜಿ ನಿಧನ


**(3ನೇ ಪುಟದಿಂದ)** ಪಾರ್ಥಿವ ಶರೀರವನ್ನು ನಾಳೆ ದಿನಾಂಕ 15ರ ಬುಧವಾರ ಮುಂಜಾನೆ 6 ರಿಂದ 9 ರವರೆಗೆ ಸ್ಥಳೀಯ ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಶಿವಧ್ಯಾನ ಮಂದಿರದಲ್ಲಿ ಸಾರ್ವಜನಿಕರ ದರ್ಶನಕ್ಕೀಡಲಾಗುವುದು.

ಅಲ್ಲಿಂದ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ಮಲೇಬೆನ್ನೂರಿನ ಬ್ರಹ್ಮಾಕುಮಾರೀಸ್ ಸಂಸ್ಥೆಯಲ್ಲಿಡಲಾಗುವುದು. ನಂತರ ಮಧ್ಯಾಹ್ನ 2 ಗಂಟೆಗೆ ಮಲೇಬೆನ್ನೂರಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಮಂಜುಳಾಜಿ, ದಾವಣಗೆರೆಯ ಕೆನರಾ ಬ್ಯಾಂಕಿನ ನಿವೃತ್ತ ಪಿಗ್ಮಿ ಸಂಗ್ರಹಕಾರರಾಗಿದ್ದ ದಿ|| ಜಿ.ಎಸ್. ಶಿವಾನಂದ ಮತ್ತು ಶ್ರೀಮತಿ ಚಿತ್ರಮ್ಮ ದಂಪತಿಯ ಆರು ಜನ ಪುತ್ರಿಯರಲ್ಲಿ ನಾಲ್ಕನೇಯವರು.

ತಮ್ಮ ವಿದ್ಯಾಭ್ಯಾಸದ ಸಂದರ್ಭದಲ್ಲಿಯೇ ಅಧ್ಯಾತ್ಮದತ್ತ ಆಕರ್ಷಿತರಾಗಿದ್ದ ಮಂಜುಳಾಜಿ, ಬ್ರಹ್ಮಾಕುಮಾರೀಸ್ ಸಂಸ್ಥೆಯ ವಿದ್ಯಾರ್ಥಿಯಾಗಿ, ರಾಜಯೋಗ ಶಿಕ್ಷಕಿಯಾಗಿ, ಮಲೇಬೆನ್ನೂರು ಶಾಖೆ ಸಂಚಾಲಕರಾಗಿ ಕಳೆದ ಸುಮಾರು 29 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು.

**ಸಂತಾಪ :** ಮಂಜುಳಾಜಿ ನಿಧನಕ್ಕೆ ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯ ನಿರ್ದೇಶಕರಾದ ರಾಜಯೋಗಿ ಬ್ರಹ್ಮಕುಮಾರ ಡಾ. ಬಸವರಾಜ ರಾಜಋಷಿ, ಹುಬ್ಬಳ್ಳಿ ವಲಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ನಿರ್ಮಲಾಜಿ, ದಾವಣಗೆರೆ ಶಾಖೆಯ ಪ್ರಧಾನ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಇ.ಎಂ. ಮಂಜುನಾಥ, ಮಲೇಬೆನ್ನೂರಿನ ಅಕ್ಕಿ ವರ್ತಕರಾದ ಪಂಚಪ್ಪ, ರುದ್ರಯ್ಯ ಮತ್ತಿತರರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

**ಭೈರಜ್ಜರ ಎಂ. ಮೈಲಪ್ಪ ನಿಧನ**

ದಾವಣಗೆರೆ ಸಿಟಿ ಗಾಂಧಿನಗರ ನಿವಾಸಿ
ನಿವೃತ್ತ ಪೌರಕಾರ್ಮಿಕರಾದ
**ಭೈರಜ್ಜರ ಎಂ. ಮೈಲಪ್ಪ**
ಇವರು, ದಿನಾಂಕ 14.5.2024ರ ಮಂಗಳವಾರ ಸಂಜೆ 5ಕ್ಕೆ ನಿದನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಸಹೋದರ, ಸಹೋದರಿಯರು, ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.5.2024ರ ಬುಧವಾರ ಮಧ್ಯಾಹ್ನ 1 ಕ್ಕೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
**ದುಃಖತಪ್ತ ಕುಟುಂಬ ವರ್ಗ, ಮೊ : 94484 15301**



**ತೃತೀಯ ವರ್ಷದ ಪುಣ್ಯಸ್ಮರಣೆ**



**ಶ್ರೀಮತಿ ಹಾಲಮ್ಮ ಪೈಲ್ವಾನ್ ಬಸವರಾಜಪ್ಪ**
ನಿಧನ : 15.05.2021

ಪ್ರೀತಿ, ವಾತ್ಸಲ್ಯದ ಬದುಕನ್ನು ಕಲಿಸಿ, ನಮ್ಮೆಲ್ಲರೊಂದಿಗೆ ಆದರ್ಶದ ಬದುಕನ್ನು ಬಾಳಿ ಸರಳ ಸೌಜನ್ಯತೆ, ಸಹನೆ, ತಾಳ್ಮೆಯ ಸಾಕಾರಾಮೂರ್ತಿಯಾಗಿದ್ದ ನಿಮ್ಮ ನೆನಪು ನಮ್ಮಲ್ಲಿ ಶಾಶ್ವತ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲಿ ಎಂದು ಪ್ರಾರ್ಥಿಸುವ

ಪತಿ: ಪೈಲ್ವಾನ್ ಬಸವರಾಜಪ್ಪ ಪುತ್ರ, ಸೊಸೆ,
ಪುತ್ರಿಯರು ಅಳಿಯಂದಿರು, ಮೊಮ್ಮಕ್ಕಳು ಹಾಗೂ
ಲಿಂಗದ ಕಲ್ಲುಗುಡಿ ದಿ|| ಪೈಲ್ವಾನ್ ಚನ್ನಬಸಪ್ಪನವರ ಕುಟುಂಬ ವರ್ಗ


## ಡಾ. ಕೆ.ಆರ್.ಸೋಮಶೇಖರಪ್ಪ ನಿಧನ



ದಾವಣಗೆರೆ, ಮೇ 14 - ಸಾಧು ಲಿಂಗಾಯತ ಸಮಾಜದ ಹಿರಿಯರು ಹಾಗು ನಿವೃತ್ತ ಜಿಲ್ಲಾ ಸಹಾಯಕ ವೈದ್ಯಾಧಿಕಾರಿ ಮಳಲಕೆರೆ ಡಾ.ಕೆ.ಆರ್.ಸೋಮಶೇಖರಪ್ಪ (93) ಅವರು ಇಂದು ಬೆಳಿಗ್ಗೆ ನಿಧನರಾದರು.

ನಗರದ ಎಂ.ಸಿ ಕಾಲೋನಿ 'ಬಿ' ಬ್ಲಾಕ್‌ನಲ್ಲಿರುವ ಅವರ ನಿವಾಸದಲ್ಲಿ ಬುಧವಾರ 11ರವರೆಗೆ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ.

ರಾಜ್ಯಸಭಾ ಸದಸ್ಯರೂ ಹಾಗೂ ಸಾಧು ಲಿಂಗಾಯತ ಸಮಾಜ ಸಂಘದ ಅಧ್ಯಕ್ಷರೂ ಆಗಿದ್ದ ದಿ. ಕೆ.ಆರ್. ಜಯದೇವಪ್ಪನವರ ಸಹೋದರರಾಗಿದ್ದ ಸೋಮಶೇಖರಪ್ಪನವರು ಮೂವರು ಪುತ್ರರರನ್ನು ಅಗಲಿದ್ದು, ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 1 ಗಂಟೆಗೆ ಮಳಲಕೆರೆ ಗ್ರಾಮದಲ್ಲಿರುವ ಅವರ ತೋಟದಲ್ಲಿ ನೆರವೇರಲಿದೆ.

### ಪಾರ್ವತಮ್ಮ ನಿಧನ



ಹರಿಹರ ವಿದ್ಯಾನಗರ ವಾಸಿ ದಿವಂಗತ ಪರಮೇಶ್ವರಯ್ಯ ಪುರಾಣ ಮಠ ಇವರ ಧರ್ಮಪತ್ನಿ ಪಾರ್ವತಮ್ಮ (88) ಇವರು ದಿನಾಂಕ 14.05.2024ರ ಸಂಜೆ 6.15ಕ್ಕೆ ನಿಧನರಾದರು. ಓರ್ವ ಪುತ್ರ, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿ.15.05.2024ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಹರಿಹರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

### ಬಸಾಪುರದ ಹಾಲೇಕಲ್ಲು ಲಲಿತಮ್ಮ ನಿಧನ



ದಾವಣಗೆರೆ ತಾಲ್ಲೂಕು ಬಸಾಪುರ ಗ್ರಾಮದ ವಾಸಿ ದಿ. ಹಾಲೇಕಲ್ಲು ಕರಿಬಸಪ್ಪ ಇವರ ಧರ್ಮಪತ್ನಿ ಶ್ರೀಮತಿ ಲಲಿತಮ್ಮ (71) ಇವರು ದಿನಾಂಕ 14.05.2024ರ ಮಂಗಳವಾರ ರಾತ್ರಿ 10.40ಕ್ಕೆ ನಿಧನರಾದರು. ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.04.2024ರ ಬುಧವಾರ ಮಧ್ಯಾಹ್ನ 1ಕ್ಕೆ ಬಸಾಪುರದ ರುದ್ರಭೂಮಿಯಲ್ಲಿ ನೆರವೇರಲಿದೆ.

## ಬೆಳ್ಳೂಡಿಯಲ್ಲಿ ಮಳೆಗಾಗಿ ಪ್ರಾರ್ಥಿಸಿ ಕತ್ತೆಗಳ ಮೆರವಣಿಗೆ



ಮಲೇಬೆನ್ನೂರು, ಮೇ 14 - ಬೆಳ್ಳೂಡಿ ಗ್ರಾಮದಲ್ಲಿ ಮಳೆಗಾಗಿ ಪ್ರಾರ್ಥಿಸಿ ಗ್ರಾಮಸ್ಥರು ಕತ್ತೆಗಳಿಗೆ ಮದುವೆ ಮಾಡಿ ಗ್ರಾಮದಲ್ಲಿ ಮೆರವಣಿಗೆ ಮಾಡಿದರು.

ಸಕಾಲಕ್ಕೆ ಮಳೆ ಬಾರದಿದ್ದಾಗ ಮಳೆಗಾಗಿ ಪ್ರಾರ್ಥಿಸಿ, ಜನರು ಕಪ್ಪೆ ಮೆರವಣಿಗೆ ಮತ್ತು ಕತ್ತೆಗಳಿಗೆ ಮದುವೆ ಮಾಡಿ ಮೆರವಣಿಗೆ ಮಾಡುವ ಸಂಪ್ರದಾಯ ಬಹುತೇಕ ಹಳ್ಳಿಗಳಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

## ನಗರದಲ್ಲಿ ಇಂದು ಕುರಿ, ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದಲ್ಲಿ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಇಂದು ಮತ್ತು ನಾಳೆ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

# ಫಲಕ ಅವಘಡದಲ್ಲಿ 14 ಸಾವು

ಮುಂಬೈ, ಮೇ 14 – ಪ್ರಚಾರ ಫಲಕ ಕುಸಿದು ಉಂಟಾದ ದುರಂತದಲ್ಲಿ ಸಾವನ್ನಪ್ಪಿದವರ ಸಂಖ್ಯೆ 14ಕ್ಕೆ ತಲುಪಿದ್ದು, 75 ಇತರರು ಗಾಯಗೊಂಡಿದ್ದಾರೆ. ಅವಘಡ ನಡೆದ ಎರಡನೇ ದಿನವೂ ರಕ್ಷಣಾ ಕಾರ್ಯಾಚರಣೆ ಮುಂದುವರೆದಿತ್ತು.

ಘಟನೆಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಮುಂಬೈ ಪೊಲೀಸ್ ಆಯುಕ್ತ ವಿವೇಕ್ ಫನಸಲ್ಕಾರ್ ಹೇಳಿದ್ದಾರೆ. ಈ ಪ್ರದೇಶದ ಜಿ. ಆರ್.ಪಿ. ಜಾಗದಲ್ಲಿ ಅಳವಡಿಸಲಾಗಿರುವ ಉಳಿದ ಫಲಕಗಳನ್ನು ತೆರವುಗೊಳಿಸುವುದಾಗಿ ಮುಂಬೈ ನಗರ ಪಾಲಿಕೆ ಹೇಳಿದೆ. 120x 120 ಅಡಿಯ ಕಬ್ಬಿಣದ ಬೃಹತ್ ಪ್ರಚಾರ ಫಲಕ ಘಟ್ಕೋಪಾರ್ ಪ್ರದೇಶದ ಪೆಟ್ರೋಲ್ ಪಂಪ್ ಮೇಲೆ ಸೋಮವಾರ ಉರುಳಿತ್ತು. ಪೆಟ್ರೋಲ್ ಪಂಪ್ ಮೇಲೆ ಫಲಕ ಉರುಳಿರುವ ಕಾರಣ, ಇಲ್ಲಿ ಗ್ಯಾಸೋಲಿನ್‌ನ ಪವರ್ ಕಟರ್ ಇಲ್ಲವೇ ಆಕ್ಸಿಫ್ಯುಯಲ್ ಕಟರ್‌ಗಳನ್ನು ಬಳಸುವಂತಿಲ್ಲ. ಇವುಗಳನ್ನು ಬಳಸಿದರೆ ಪೆಟ್ರೋಲ್ ಪಂಪ್‌ನಲ್ಲಿ ಸ್ಫೋಟ ಇಲ್ಲವೇ ಬೆಂಕಿ ಅವಘಡ ಸಂಭವಿಸುವ ಸಾಧ್ಯತೆ ಇದೆ ಎಂದು ರಾಷ್ಟ್ರೀಯ ವಿಕೋಪ ಸ್ಪಂದನಾ ದಳ ತಿಳಿಸಿದೆ. ನೆರವಿಗಾಗಿ 12 ಅಗ್ನಿಶಾಮಕ ವಾಹನಗಳು ಹಾಗೂ ಇತರೆ ವಾಹನಗಳನ್ನು ಕಳಿಸಲಾಗಿದೆ. 100 ಜನ ಸಿಬ್ಬಂದಿ ಇರುವ ಎನ್.ಡಿ.ಆರ್.ಎಫ್. ತಂಡ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದೆ. ಭಾರೀ ಕ್ರೇನ್‌ಗಳು, ಎರಡು ಅರ್ತ್ ಮೂವರ್‌ಗಳು ಹಾಗೂ 25 ಆಂಬ್ಯುಲೆನ್ಸ್‌ಗಳನ್ನು ರಕ್ಷಣಾ ಕಾರ್ಯಾಚರಣೆಗೆ ಬಳಸಲಾಗಿದೆ.

ಭಾರೀ ಕ್ರೇನ್‌ಗಳ ಮೂಲಕ ಫಲಕವನ್ನು ಎರಡೂ ಕಡೆಯಿಂದ ಎತ್ತಲಾಗಿದೆ. ನಂತರ 4 ಅಡಿಯ ಜಾಗ ದೊರೆತಿದೆ. ಈ ಕಿರಿದಾದ ಜಾಗದಲ್ಲಿ ಅವಶೇಷಗಳಡಿ ಸಿಲುಕಿರುವ ಜನರನ್ನು ರಕ್ಷಿಸಲಾಗುತ್ತಿದೆ.

ಇದುವರೆಗೂ ಅವಶೇಷಗಳಡಿಯಿಂದ 89 ಜನರನ್ನು ಹೊರ ತರಲಾಗಿದೆ. ಇವರಲ್ಲಿ 14 ಜನ ಸಾವನ್ನಪ್ಪಿದ್ದಾರೆ. ಒಬ್ಬರ ಸ್ಥಿತಿ ಗಂಭೀರವಾಗಿದೆ.

## ಡಿಹೆಚ್‌ಎಫ್‌ಎಲ್ 34 ಸಾವಿರ ಕೋ.ರೂ. ವಂಚನೆ

### ಮಾಜಿ ನಿರ್ದೇಶಕ ವಾಧವಾನ್ ಬಂಧನ

ನವದೆಹಲಿ, ಮೇ 14 – 34 ಸಾವಿರ ಕೋಟಿ ರೂ.ಗಳ ಬ್ಯಾಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿ.ಹೆಚ್.ಎಫ್.ಎಲ್. ಮಾಜಿ ನಿರ್ದೇಶಕ ಧೀರಜ್ ವಾಧವಾನ್ ಬಂಧಿಸಲಾಗಿದೆ ಎಂದು ಸಿ.ಬಿ.ಐ. ಅಧಿಕಾರಿಗಳು ಹೇಳಿದ್ದಾರೆ.

ಮುಂಬೈನಲ್ಲಿ ಸೋಮವಾರ ಸಂಜೆ ವಾಧವಾನ್ ಬಂಧಿಸಲಾಗಿದೆ. ದೆಹಲಿ ವಿಶೇಷ ನ್ಯಾಯಾಲಯದ ಎದುರು ಹಾಜರು ಪಡಿಸಿದ ನಂತರ ನ್ಯಾಯಾಂಗ ಕಸ್ಟಡಿಗೆ ವಹಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ 2022ರಲ್ಲಿ ವಾಧವಾನ್ ವಿರುದ್ಧ ಸಿ.ಬಿ.ಐ. ಆರೋಪ ಪಟ್ಟಿ ದಾಖಲಿಸಿತ್ತು. ಯೆಸ್ ಬ್ಯಾಂಕ್ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ವಾಧವಾನ್ ಬಂಧಿಸಲಾಗಿತ್ತು. ನಂತರ ಈ ಪ್ರಕರಣದಲ್ಲಿ ಜಾಮೀನು ನೀಡಲಾಗಿತ್ತು. ಡಿ.ಹೆಚ್.ಎಫ್.ಎಲ್. ಪ್ರಕರಣದಲ್ಲಿ 17 ಬ್ಯಾಂಕುಗಳ ಕೂಟಕ್ಕೆ 34 ಸಾವಿರ ಕೋಟಿ ರೂ.ಗಳ ವಂಚನೆ ಮಾಡಲಾಗಿದೆ ಎಂದು ಪ್ರಕರಣ ದಾಖಲಿಸಲಾಗಿದೆ. ಇದು ದೇಶದ ಅತಿ ದೊಡ್ಡ ಬ್ಯಾಂಕಿಂಗ್ ಸಾಲ ವಂಚನೆ ಎಂದು ಸಿ.ಬಿ.ಐ. ತಿಳಿಸಿದೆ.


# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮೇ 15, 2024


## ವೈದ್ಯಕೀಯ ವೃತ್ತಿ ಗ್ರಾಹಕರ ಕಾಯ್ದೆ ವ್ಯಾಪ್ತಿಯ ಮರು ಪರಿಶೀಲನೆ



ನವದೆಹಲಿ, ಮೇ 14 – ವೈದ್ಯಕೀಯ ವೃತ್ತಿಯನ್ನು ಗ್ರಾಹಕರ ರಕ್ಷಣಾ ಕಾಯ್ದೆ ವ್ಯಾಪ್ತಿಗೆ ತರುವ 1995ರ ತೀರ್ಪು ಮರು ಪರಿಶೀಲಿಸುವ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಈ ಹಿಂದೆ ಸುಪ್ರೀಂ ಕೋರ್ಟ್‌ನ ಮೂವರು ಸದಸ್ಯರ ಪೀಠ ನೀಡಿದ ತೀರ್ಪು ಮರು ಪರಿಶೀಲಿಸಬೇಕಿದೆ ಎಂದು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಪಂಕಜ್ ಮಿತ್ತಲ್ ಅವರನ್ನು ಒಳಗೊಂಡ ಪೀಠ ಹೇಳಿದೆ. ಪೀಠ ಈ ವಿಷಯವನ್ನು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಪರಿಶೀಲನೆಗೆ ವಹಿಸಿದೆ.

## ವಕೀಲರು ಗ್ರಾಹಕರ ಕಾಯ್ದೆಯಡಿ ಬರುವುದಿಲ್ಲ : ಸುಪ್ರೀಂ ಕೋರ್ಟ್

ನವದೆಹಲಿ, ಮೇ 14 - ವಕೀಲರ ಸೇವಾ ಕೊರತೆಗಳು ಗ್ರಾಹಕರ ರಕ್ಷಣಾ ಕಾಯ್ದೆ 1986ರ ಅಡಿ ಬರುವುದಿಲ್ಲ. ವಕೀಲರ ಸೇವೆ ತೃಪ್ತಿಕರವಾಗಿಲ್ಲ ಎಂದು ಗ್ರಾಹಕರ ನ್ಯಾಯಾಲಯಗಳಲ್ಲಿ ಅರ್ಜಿ ದಾಖಲಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕಾನೂನು ಸೇವೆ ವಿಶಿಷ್ಟ ವೃತ್ತಿಯಾಗಿದೆ. ಇದನ್ನು ಇತರೆ ವೃತ್ತಿಗಳ ಜೊತೆ ಹೋಲಿಸಲಾಗದು ಎಂದು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಹಾಗೂ ಪಂಕಜ್ ಮಿತ್ತಲ್ ಅವರನ್ನು ಒಳಗೊಂಡ ಪೀಠ ಹೇಳಿದೆ.

# ಸರಣಿ ಚುನಾವಣೆ: 'ನೀತಿ'ಯಿಂದ ಅಭಿವೃದ್ಧಿಗೆ ಅಡ್ಡಿ

### ಲೋಕಸಭಾ ಚುನಾವಣೆ ಮುಗಿಯುತ್ತಿದ್ದಂತೆ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳ ಆರು ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆ ಆರಂಭ

ಬೆಂಗಳೂರು, ಮೇ 14 - ಕರ್ನಾಟಕಕ್ಕೆ ಒಂದಲ್ಲಾ ಒಂದು ಚುನಾವಣೆಗಳು ಮೇಲಿಂದೆರಗಿ ಮಾದರಿ ನೀತಿ ಸಂಹಿತೆ ರಾಜ್ಯದ ಅಭಿವೃದ್ಧಿಗೆ ಅಡ್ಡಿಯಾಗಿದೆ.

ಲೋಕಸಭಾ ಚುನಾವಣೆಗೆ ರಾಜ್ಯದಲ್ಲಿ ಎರಡು ಹಂತದ ಮತದಾನ ಮುಗಿಯುತ್ತಿದ್ದಂತೆ ಪದವೀಧರ ಹಾಗೂ ಶಿಕ್ಷಕರ ಕ್ಷೇತ್ರಗಳಿಂದ ತೆರವಾಗುತ್ತಿರುವ ಆರು ಸ್ಥಾನಗಳಿಗೆ ಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿದೆ.

ಇದರ ನಡುವೆ ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್ತಿನ 11 ಸ್ಥಾನಗಳು ಜುಲೈ 17ಕ್ಕೆ ತೆರವಾಗಲಿದ್ದು, ಈ ಸ್ಥಾನಗಳಿಗೂ ಕೇಂದ್ರ ಚುನಾವಣಾ ಆಯೋಗ ಅಧಿಸೂಚನೆ ಹೊರಡಿಸುವ ವೇಳೆ ಸನ್ನಿಹಿತವಾಗಿದೆ. 11 ಸ್ಥಾನಗಳ ಜೊತೆಗೆ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರಿಂದ ತೆರವಾದ ಅಲ್ಪಾವಧಿಯ ಒಂದು ಸ್ಥಾನದ ಚುನಾವಣೆಗೆ ಪ್ರತ್ಯೇಕ ಅಧಿಸೂಚನೆ ಹೊರಬೀಳಲಿದೆ.

ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದ ಶೆಟ್ಟರ್ ಅವರಿಗೆ ಪಕ್ಷ ಈ ಸ್ಥಾನ ಕಲ್ಪಿಸಿತ್ತು. ನಂತರ ಅವರು, ಕಾಂಗ್ರೆಸ್ ತೊರೆದು ಬಿಜೆಪಿ ಸೇರ್ಪಡೆಗೊಳ್ಳುವ ಸಮಯದಲ್ಲಿ ಪರಿಷತ್ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು, ಈಗ ಈ ಸ್ಥಾನಕ್ಕೆ ಚುನಾವಣೆ ನಡೆಯಬೇಕಿದೆ. ಲೋಕ ಸಭಾ ಚುನಾವಣೆಯ ಪ್ರಕ್ರಿಯೆ ಪೂರ್ಣಗೊಂಡ ನಂತರ 11 ಸ್ಥಾನಗಳಿಗೆ ಆಯೋಗ ಚುನಾವಣೆ ನಡೆಸಲು ಸಿದ್ಧತೆ ನಡೆಸಿದ ಬೆನ್ನಲ್ಲೇ, ಈ ಸ್ಥಾನಗಳನ್ನು ಗೆಲ್ಲಲು ಕಾಂಗ್ರೆಸ್, ಬಿಜೆಪಿ-ಜೆಡಿಎಸ್‌ನಲ್ಲಿ ಪೈಪೋಟಿ ಆರಂಭಗೊಂಡಿದೆ.

ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಆಡಳಿತಾರೂಢ ಕಾಂಗ್ರೆಸ್ 11 ಸ್ಥಾನಗಳ ಪೈಕಿ 7 ಸ್ಥಾನಗಳನ್ನು ಗಳಿಸಲು ಅವಕಾಶ ಇದೆ, ಉಳಿದ ನಾಲ್ಕರಲ್ಲಿ ಬಿಜೆಪಿಗೆ ಮೂರು ಹಾಗೂ ಜೆಡಿಎಸ್‌ಗೆ ಒಂದು ಸ್ಥಾನ ಸುಲಭವಾಗಿ ಲಭ್ಯವಾಗಲಿವೆ.

ತೇಜಸ್ವಿನಿಗೌಡ ಹಾಗೂ ಕೆ.ಪಿ.ನಂಜುಂಡಿ ಕಳೆದ ಬಾರಿ ಬಿಜೆಪಿಯಿಂದ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಗೊಂಡಿದ್ದರು. ಬದಲಾದ ಸನ್ನಿವೇಶದಲ್ಲಿ ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರ್ಪಡೆಗೊಂಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಪುಟದಲ್ಲಿ ಸಚಿವರಾಗಿರುವ ಎನ್.ಎಸ್. ಬೋಸರಾಜ್, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಅರವಿಂದ ಕುಮಾರ್ ಅರಳಿ, ಕೆ.ಹರೀಶ್ ಕುಮಾರ್ (ಕಾಂಗ್ರೆಸ್).

ಬಿ.ಎಂ.ಫಾರೂಕ್ (ಜೆಡಿಎಸ್), ರಘುನಾಥರಾವ್ ಮಲ್ಕಾಪೂರೆ, ಎನ್. ರವಿಕುಮಾರ್, ಎಸ್.ರುದ್ರೇಗೌಡ, ಹಾಗೂ ಮನುರಾಜೂಗೌಡ (ಬಿಜೆಪಿ) ಇವರ ಸದಸ್ಯಾವಧಿ ಜುಲೈ 17ಕ್ಕೆ ಪೂರ್ಣಗೊಳ್ಳಲಿದೆ.

ನಿವೃತ್ತಗೊಳ್ಳುವ ಸದಸ್ಯರಲ್ಲಿ ಆಯಾ ಪಕ್ಷ ಎಷ್ಟು ಮಂದಿಗೆ ಮತ್ತೆ ಅವಕಾಶ ಮಾಡಿಕೊಡುತ್ತದೋ ತಿಳಿಯದು.

ಆದರೆ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ವಿಧಾನ ಪರಿಷತ್ ಸ್ಥಾನ ಪಡೆಯಲು ಭಾರಿ ಪೈಪೋಟಿಯೇ ನಡೆದಿದೆ.

ಲೋಕಸಭೆ ಹಾಗೂ ವಿಧಾನಸಭಾ ಚುನಾವಣೆಯಲ್ಲಿ ಅವಕಾಶ ದೊರೆಯದ ಮುಖಂಡರುಗಳಿಗೆ ಪಕ್ಷಗಳ ನಾಯಕರು ವಿಧಾನ ಪರಿಷತ್ ಕಡೆ ಬೊಟ್ಟು ತೋರಿಸಿದ್ದರು.

ತದನಂತರ ಚುನಾವಣೆಯಲ್ಲಿ ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಳ್ಳಲು ಬಿಜೆಪಿ ಹಾಗೂ ಜೆಡಿಎಸ್‌ನಿಂದ ಹಲವು ಮುಖಂಡರನ್ನು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದೆ.

ಅದರಲ್ಲಿ ಕೆಲವರಿಗೆ ವಿಧಾನ ಪರಿಷತ್‌ನಲ್ಲಿ ಅವಕಾಶ ಮಾಡಿಕೊಡುವುದಾಗಿ ಭರವಸೆ ನೀಡಿದ್ದಾರೆ, ಬಿಜೆಪಿಯೂ ಭರವಸೆಗಳಿಂದ ಹೊರತಾಗಿಲ್ಲ. ಲೋಕಸಭಾ ಚುನಾವಣೆಯಲ್ಲಿ ಬಂಡಾಯ ಎದ್ದ ಕೆಲವರಿಗೆ ವಿಧಾನ ಪರಿಷತ್ತಿನ ಕಡೆ ಬೊಟ್ಟು ಮಾಡಿ ತೋರಿಸಿದೆ.

ಆ ಪಕ್ಷಕ್ಕೆ ದೊರೆಯುವ ಮೂರು ಸ್ಥಾನಗಳಲ್ಲಿ ನಿವೃತ್ತರಾಗಲಿರುವ ಕೆಲವು ಪ್ರಭಾವಿಗಳಿಗೂ ಅವಕಾಶ ಮಾಡಿಕೊಡುತ್ತಾರೋ ಕಾದು ನೋಡಬೇಕು. ಇನ್ನು ಜೆಡಿಎಸ್‌ಗೆ ಒಂದು ಸ್ಥಾನವಿದ್ದು ಆ ಪಕ್ಷದ ನಾಯಕ ಹೆಚ್.ಡಿ.ಕುಮಾರಸ್ವಾಮಿ ಕೆಲವರಿಗೆ ಭರವಸೆ ನೀಡಿದ್ದಾರೆ, ಇವರಲ್ಲಿ ಯಾರಿಗೆ ಅವಕಾಶ ದೊರೆಯಲಿದೆ ಕಾದು ನೋಡಬೇಕಿದೆ.



ಚಿತ್ರ: ರಫೀಕ್, ಜನತಾವಾಣಿ

ಮುಂಗಾರು ಉತ್ತಮವಾಗಬಹುದೆಂಬ ಆಶಾಭಾವನೆ ಕೃಷಿಕರಲ್ಲಿದೆ. ಅಲ್ಲಲ್ಲಿ ಮಳೆಯ ಸಿಂಚನವೂ ಆಗುತ್ತಿದೆ. ಹರಪನಹಳ್ಳಿ ತಾಲ್ಲೂಕು ದುಗ್ಗಾವತಿ ಬಳಿ ರೈತರು ಮುಂಗಾರು ಬಿತ್ತನೆಗೆ ಕೃಷಿ ಭೂಮಿಯನ್ನು ಹದ ಮಾಡಿಕೊಳ್ಳಲಾರಂಭಿಸಿದ್ದಾರೆ.

## ಫಸಲ್ ಬಿಮಾ ಯೋಜನೆ: ಬೆಳೆ ಕಟಾವು ಪ್ರಯೋಗದ ಲೋಪ ಸರಿಪಡಿಸಲು ಸೂಚನೆ

ದಾವಣಗೆರೆ, ಮೇ 14- ಮುಂಗಾರು ಹಂಗಾಮಿನ ಫಸಲ್ ಬಿಮಾ ಯೋಜನೆಯಡಿ ಬೆಳೆ ಕಟಾವು ಪ್ರಾಯೋಗಿಕ ಪರೀಕ್ಷೆಯಲ್ಲಿ ಕೆಲವು ವ್ಯತ್ಯಾಸಗಳಾಗಿದ್ದು, ಇವುಗಳನ್ನು ಸರಿಪಡಿಸಿ ರೈತರಿಗೆ ಬೆಳೆ ವಿಮಾ ಪರಿಹಾರ ಒದಗಿಸಬೇಕೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕೃಷಿ ವಿಮಾ ಕಂಪನಿ ಅಧಿಕಾರಿಗಳು, ಕೃಷಿ ಅಧಿಕಾರಿಗಳು ಹಾಗೂ ಸಾಂಖ್ಯಿಕ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಂಗಾರು ಹಂಗಾಮಿನಲ್ಲಿ ಫಸಲ್ ಬಿಮಾ ಯೋಜನೆಯಡಿ ಬೆಳೆ ವಿಮಾ ಕಂತು ಪಾವತಿಸಿದ ರೈತರಿಗೆ ವಿಮಾ ಪರಿಹಾರ ನೀಡಲು ಜಿಲ್ಲೆಯಲ್ಲಿ 40 ಬೆಳೆ ಕಟಾವು ಪರೀಕ್ಷೆ ನಡೆಸಲಾಗಿದ್ದು ಇದರಲ್ಲಿ 17 ಕಡೆ ಮಾಡಿದ ಬೆಳೆ ಕಟಾವು ಪ್ರಾಯೋಗಿಕ ಪರೀಕ್ಷೆ ನಡೆಸಿ ಅಪ್‌ಲೋಡ್ ಮಾಡಿದ ಕೆಲವು ವಿಡಿಯೋಗಳಲ್ಲಿನ ಅಂಶಗಳ ಬಗ್ಗೆ ವಿಮಾ ಕಂಪನಿಯ ಅಧಿಕಾರಿಗಳು ಸಂಶಯ ವ್ಯಕ್ತಪಡಿಸಿದ್ದು ಇವುಗಳ ಬಗ್ಗೆ ಪರಿಶೀಲನೆ ನಡೆಸಿ ಇತ್ಯರ್ಥ ಮಾಡಲಾಯಿತು.

ಕೆಲವೊಂದು ಪ್ರಯೋಗಗಳಲ್ಲಿ ನಿಗದಿತ ಸರ್ವೆ ನಂಬರ್ ಬದಲಾಗಿ ಬೇರೆ ಸರ್ವೆ ನಂಬರ್‌ನಲ್ಲಿ ಬೆಳೆ ಕಟಾವು ಪರೀಕ್ಷೆಗಳನ್ನು ಮಾಡಲಾಗಿದ್ದು ಇದು ಮಳೆಯಾಶ್ರಿತ ಅಥವಾ ನೀರಾವರಿ ಆಶ್ರಿತವೋ ಎಂಬ ಬಗ್ಗೆ ವಿಮಾ ಕಂಪನಿ ಅಧಿಕಾರಿಗಳು ಸಂಶಯ ವ್ಯಕ್ತಪಡಿಸಿದಾಗ, ನೀರಾವರಿ (5ನೇ ಪುಟಕ್ಕೆ)



## 11597 ರೈತರ ಖಾತೆಗಳು ವ್ಯತ್ಯಾಸ

ದಾವಣಗೆರೆ, ಮೇ 14- ಮುಂಗಾರು ಹಂಗಾಮಿನ ಬೆಳೆ ನಷ್ಟ ಪರಿಹಾರವಾಗಿ ಎರಡನೇ ಕಂತಿನಲ್ಲಿ ಜಿಲ್ಲೆಯ 69575 ರೈತರಿಗೆ ರೂ. 44.35 ಕೋಟಿ ಇನ್‌ಪುಟ್ ಸಬ್ಸಿಡಿ ಬಿಡುಗಡೆ ಮಾಡಿದ್ದು ದಾಖಲಾತಿ ಹೊಂದಾಣಿಕೆಯಾಗದ 11597 ರೈತರಿಗೆ ಪರಿಹಾರ ಬಿಡುಗಡೆ ಮಾಡಲು ಬ್ಯಾಂಕ್ ಖಾತೆಯ ದಾಖಲಾತಿಗಳನ್ನು ಸರಿಪಡಿಸಬೇಕಾಗಿದೆ ಎಂದು ಜಿಲ್ಲಾಧಿಕಾರಿ ಡಾ.ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬ್ಯಾಂಕರ್ಸ್ ಅಧಿಕಾರಿಗಳೊಂದಿಗೆ ನಡೆಸಿದ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮೊದಲ ಕಂತಿನಲ್ಲಿ ತಲಾ 2 ಸಾವಿರದಂತೆ 82928 ರೈತರಿಗೆ ಹಾಗೂ ಎರಡನೇ ಹಂತದಲ್ಲಿ 69575 ರೈತರಿಗೆ ಒಟ್ಟು ರೂ.60.23 ಕೋಟಿ ಬೆಳೆ ಪರಿಹಾರ ಬಿಡುಗಡೆ ಮಾಡಲಾಗಿದೆ. ಇನ್ನೂ 11597 ರೈತರಿಗೆ ಇನ್‌ಪುಟ್ ಸಬ್ಸಿಡಿ ಬಿಡುಗಡೆ ಮಾಡಬೇಕಾಗಿದ್ದು, ಇವರ ಖಾತೆಯ ವಿವರಗಳು ಸರಿಯಾಗಿರದ ಕಾರಣ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ. ಇದರಲ್ಲಿ 5575 ರೈತರ ಖಾತೆಗಳಿಗೆ ಆಧಾರ್ ಜೋಡಣೆಯಾಗಿರುವುದಿಲ್ಲ. ಐಎಫ್‌ಎಸ್‌ಸಿ ಕೋಡ್ ತಪ್ಪಾಗಿರುವ 3696, ಫ್ರೂಟ್ಸ್ ಮತ್ತು ಆಧಾರ್‌ಗೆ ಮಿಸ್ ಮ್ಯಾಚ್ ಆಗಿರುವ 1684, ಆಧಾರ್ ಜೋಡಣೆಯಾಗದ 244 ಸೇರಿದಂತೆ ವಿಫಲ ಪಾವತಿ ಸೇರಿದಂತೆ ಇತರೆ ಕಾರಣದಿಂದ ಪಾವತಿ ಮಾಡಲು ಸಾಧ್ಯವಾಗಿರುವುದಿಲ್ಲ.

ಎಲ್ಲಾ ತಾಲ್ಲೂಕುಗಳಲ್ಲಿ ಪರಿಹಾರದ ಬಗ್ಗೆ ಸಹಾಯಕ್ಕಾಗಿ ಸಹಾಯವಾಣಿ ಸ್ಥಾಪಿಸಲಾಗಿದ್ದು ಇಲ್ಲಿಯವರೆಗೆ 1374 (5ನೇ ಪುಟಕ್ಕೆ)

## ಮಲೇಬೆನ್ನೂರಿನ ಬ್ರಹ್ಮಾಕುಮಾರಿ ಮಂಜುಳಾಜಿ ನಿಧನ



ದಾವಣಗೆರೆ, ಮೇ 14 - ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಮಲೇಬೆನ್ನೂರು ಶಾಖೆ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಮಂಜುಳಾಜಿ ಇಂದು ರಾತ್ರಿ 11.30ರ ವೇಳೆಗೆ ನಿಧನರಾದರು.

ಅನಾರೋಗ್ಯದಿಂದ ಬಳಲುತ್ತಿದ್ದ ಮಂಜುಳಾ ಅವರಿಗೆ ಸುಮಾರು 55 ವರ್ಷ ವಯಸ್ಸಾಗಿತ್ತು. ಅವರ (2ನೇ ಪುಟಕ್ಕೆ)

## ಎಲ್‌ಟಿಟಿಇ ನಿಷೇಧ ಐದು ವರ್ಷ ಮುಂದುವರಿಕೆ

ನವದೆಹಲಿ, ಮೇ 14 – ಎಲ್.ಟಿ.ಟಿ.ಇ. ಸಂಘಟನೆಯ ಮೇಲೆ ಹೇರಲಾಗಿರುವ ನಿಷೇಧವನ್ನು ಕೇಂದ್ರ ಸರ್ಕಾರ ಇನ್ನೂ ಐದು ವರ್ಷಗಳ ಕಾಲ ವಿಸ್ತರಿಸಿದೆ.

ಪ್ರತ್ಯೇಕತಾವಾದಕ್ಕೆ ಕುಮ್ಮಕ್ಕು ನೀಡುವ ಹಾಗೂ ಭಾರತದ ಸಮಗ್ರತೆಯ ವಿರುದ್ಧದ ಕೃತ್ಯಗಳನ್ನು ಎಸಗುವ ಕಾರಣಕ್ಕಾಗಿ ಈ ನಿಷೇಧ ಹೇರಲಾಗಿದೆ.

ಎಲ್.ಟಿ.ಟಿ.ಇ. ಶ್ರೀಲಂಕಾದ ಸಂಘಟನೆಯಾಗಿದೆ. ಆದರೆ, ಇದು ಭಾರತದಲ್ಲೂ ತನ್ನ ಬೆಂಬಲಿಗರು ಹಾಗೂ ಏಜೆಂಟರನ್ನು ಹೊಂದಿದೆ ಎಂದು ಕೇಂದ್ರ ಗೃಹ ಸಚಿವಾಲಯ ತಿಳಿಸಿದೆ.

## ಪ್ರಧಾನಿ ಆಸ್ತಿ ಮೌಲ್ಯ 3 ಕೋಟಿ ರೂ.

ವಾರಣಾಸಿ, ಮೇ 14 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆಸ್ತಿ 3 ಕೋಟಿ ರೂ.ಗಳಷ್ಟಿದೆ ಎಂದು ನಾಮಪತ್ರ ದಾಖಲಿಸುವ ವೇಳೆ ಮಾಹಿತಿ ನೀಡಲಾಗಿದೆ.

ವಾರಣಾಸಿ ಕ್ಷೇತ್ರದಿಂದ ಮೋದಿ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರದ ವೇಳೆ ಸಲ್ಲಿಸಲಾಗಿರುವ ಪ್ರಮಾಣ ಪತ್ರದ ಪ್ರಕಾರ ಮೋದಿ ಅವರ ಆಸ್ತಿ ಮೌಲ್ಯ 3,02,06,889 ರೂ. ಆಗಿದೆ. ಇದರಲ್ಲಿ ಹೆಚ್ಚಿನ (5ನೇ ಪುಟಕ್ಕೆ)

## ಸಗಟು ಹಣದುಬ್ಬರ ದರ ಏರಿಕೆ

ನವದೆಹಲಿ, ಮೇ 14 - ಏಪ್ರಿಲ್‌ನಲ್ಲಿ ಸಗಟು ಹಣದುಬ್ಬರ ದರ ಏರಿಕೆಯಾಗಿದ್ದು ಶೇ.1.26ಕ್ಕೆ ತಲುಪಿದೆ. ಸತತ ಎರಡು ತಿಂಗಳಿನಿಂದ ಹಣದುಬ್ಬರ ದರ ಏರಿಕೆಯಾಗಿದೆ. ಆಹಾರ, ತರಕಾರಿ, ಇಂಧನ ಹಾಗೂ ವಿದ್ಯುತ್ ಬೆಲೆ ಏರಿಕೆ ಇದಕ್ಕೆ ಕಾರಣ. ಕಳೆದ ವರ್ಷ ಏಪ್ರಿಲ್ ತಿಂಗಳಲ್ಲಿ ಸಗಟು ಹಣದುಬ್ಬರ ದರ ಶೇ.0.79ರಷ್ಟಿತ್ತು. 2024ರ ಮಾರ್ಚ್‌ನಲ್ಲಿ ಹಣದುಬ್ಬರ ದರ ಶೇ.0.53ರಷ್ಟಿತ್ತು.

## ಷೇರು ಹೂಡಿಕೆ ಹೆಸರಿನಲ್ಲಿ ಇಂಜಿನಿಯರ್‌ಗೆ 3.7 ಕೋಟಿ ರೂ. ವಂಚನೆ

ಥಾನೆ, ಮೇ 14 - ಷೇರು ಹೂಡಿಕೆಯಲ್ಲಿ ಹೆಚ್ಚು ಲಾಭ ನೀಡುವುದಾಗಿ ಮಹಾರಾಷ್ಟ್ರದ ನವಿ ಮುಂಬೈನ ಇಂಜಿನಿಯರ್ ಒಬ್ಬರಿಗೆ ಆಮಿಷ ಒಡ್ಡಿ 3.7 ಕೋಟಿ ರೂ. ವಂಚಿಸಿದ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಫೆಬ್ರವರಿ 17, 2024ರಂದು 43 ವರ್ಷದ ಕೆಮಿಕಲ್ ಇಂಜಿನಿಯರ್ ಒಬ್ಬರು ಸಾಮಾಜಿಕ ಜಾಲತಾಣದಲ್ಲಿ ಹೂಡಿಕೆಯ ಅವಕಾಶದ ಬಗ್ಗೆ ಲಿಂಕ್ ಪಡೆದಿದ್ದರು.

ಷೇರು ಹೂಡಿಕೆಗೆ ಉತ್ತಮ ಲಾಭ ನೀಡುವುದಾಗಿ ಇದರಲ್ಲಿ ತಿಳಿಸಲಾಗಿತ್ತು. ಇದರಲ್ಲಿ ಸೂಚಿಸಿದ್ದ ಮೊಬೈಲ್ ಸಂಖ್ಯೆಗೆ ಅವರು ಕರೆ ಮಾಡಿದ್ದರು.

ವಾಟ್ಸ್ಯಾಪ್ ಗುಂಪೊಂದನ್ನು ಸೇರಿ ಹೂಡಿಕೆಯ ಬಗ್ಗೆ ತಿಳಿಯುವಂತೆ ಅವರಿಗೆ ಸೂಚನೆ ನೀಡಲಾಗಿತ್ತು. ಅದರಂತೆ ಫೆಬ್ರವರಿ 17ರಿಂದ ಏಪ್ರಿಲ್ 24ರ ನಡುವೆ ಅವರು 3.7 ಕೋಟಿ ರೂ.ಗಳ ಹೂಡಿಕೆ ಮಾಡಿದ್ದರು.

ಆದರೆ, ನಂತರದಲ್ಲಿ ಅವರು ತಮ್ಮ ಹೂಡಿಕೆಯ ಹಣ ವಾಪಸ್ ಪಡೆಯಲು ಸಾಧ್ಯವಾಗಿರಲಿಲ್ಲ. ನಂತರ ಅವರಿಗೆ ವಂಚನೆಯಾಗಿರುವುದು ತಿಳಿದು ಪೊಲೀಸರಲ್ಲಿ ದೂರು ದಾಖಲಿಸಿದ್ದಾರೆ.

## ವಾಣಿಜ್ಯ ವಿದ್ಯಾರ್ಥಿಗಳು ಜಾಗತಿಕ ನಾಗರಿಕರು

### ಜಿ.ಎಂ. ವಿವಿ ಅಂತರರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಕುಲಪತಿ ಎಸ್.ಆರ್. ಶಂಖಪಾಲ್

ದಾವಣಗೆರೆ, ಮೇ 14 - ವಾಣಿಜ್ಯ ವಲಯದ ಹುದ್ದೆಗಳು ಈಗ ಪ್ರಾಂತ್ಯ ಇಲ್ಲವೇ ದೇಶಕ್ಕೆ ಸೀಮಿತವಲ್ಲ. ವಾಣಿಜ್ಯ ಹಾಗೂ ನಿರ್ವಹಣಾ ವಿಭಾಗದ ವಿದ್ಯಾರ್ಥಿಗಳು ಈಗ ಜಾಗತಿಕ ನಾಗರಿಕರಂತಾಗಿದ್ದಾರೆ. ವಿಶ್ವದ ಯಾವುದೇ ಭಾಗದಲ್ಲಿ ಉದ್ಯೋಗಕ್ಕೆ ಸಿದ್ಧವಾಗಬೇಕಿದೆ ಎಂದು ಜಿ.ಎಂ. ವಿಶ್ವವಿದ್ಯಾಲಯದ ಕುಲಪತಿ ಎಸ್.ಆರ್. ಶಂಖಪಾಲ್ ತಿಳಿಸಿದರು.

ನಗರದ ಜಿ.ಎಂ. ವಿಶ್ವವಿದ್ಯಾಲಯದ ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ವತಿಯಿಂದ ಆಯೋಜಿಸಲಾಗಿರುವ ಮೂರು ದಿನಗಳ ಅಂತರರಾಷ್ಟ್ರೀಯ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 'ವಾಣಿಜ್ಯ ಶಿಕ್ಷಣ - ಗಡಿ ದಾಟಿ ಸಂಪರ್ಕ - ಭವಿಷ್ಯ ರೂಪಿಸುವುದು' ಎಂಬ ವಿಷಯದ ಕುರಿತು ಸಂಕಿರಣ ಆಯೋಜಿಸಲಾಗಿತ್ತು.

ಜಾಗತಿಕ ಅಗತ್ಯಗಳು ಹಾಗೂ ಬೇಡಿಕೆಗಳನ್ನು ಗಮನದಲ್ಲಿಟ್ಟುಕೊಂಡು ಎಂ.ಬಿ.ಎ. ಹಾಗೂ ಎಂ.ಕಾಂ. ವಿದ್ಯಾರ್ಥಿಗಳು ಅಧ್ಯಯನದಲ್ಲಿ ತೊಡಗಬೇಕಿದೆ. ವಿದ್ಯಾರ್ಥಿಗಳು ಜಾಗತಿಕವಾಗಿ ಹೆಚ್ಚು ತೆರೆದುಕೊಳ್ಳಬೇಕು ಹಾಗೂ ಹೆಚ್ಚು ವಿಶ್ವಾಸ ಹೊಂದಬೇಕು. ಜಾಗತಿಕ ಸ್ಪರ್ಧೆಗೆ ಸಿದ್ಧವಾಗಬೇಕು ಎಂದರು.

ದೊಡ್ಡ ನಗರಗಳ ವಿದ್ಯಾರ್ಥಿಗಳಿಗೆ ಈ ದಿಸೆಯಲ್ಲಿ ಹೆಚ್ಚು ಅನುಕೂಲ ಇರುತ್ತದೆ. ಸಣ್ಣ ನಗರಗಳ ವಿದ್ಯಾರ್ಥಿಗಳಿಗೆ ಜಾಗತಿಕ ಅನುಭವ



ಇಲ್ಲದೇ ವಿಶ್ವಾಸ ಕುಂಠಿತವಾಗುವ ಸಾಧ್ಯತೆ ಇದೆ. ಅಂತರರಾಷ್ಟ್ರೀಯ ಮಟ್ಟದ ಅನುಭವಕ್ಕೆ ಒಗ್ಗಿಕೊಳ್ಳಲು ಇಂತಹ ಸಂಕಿರಣಗಳು ಅನುಕೂಲಕರ ಎಂದವರು ಹೇಳಿದರು.

ವಿದೇಶಗಳಲ್ಲಿ ಶಿಕ್ಷಣ ಪಡೆದಾಗ ಉದ್ಯೋಗಾವಕಾಶ ಹೆಚ್ಚು ಎಂಬ ಭಾವನೆ ಇದೆ. ಆದರೆ, ಯುರೋಪ್, ಅಮೆರಿಕ ಮುಂತಾದ ದೇಶಗಳ ಪರಿಣಿತರನ್ನು ಭಾರತಕ್ಕೆ ಕರೆಸಿದಾಗಲೂ ಉತ್ತಮ ಅನುಭವ ಪಡೆಯಲು ಸಾಧ್ಯ ಎಂದು ಶಂಖಪಾಲ್ ಅಭಿಪ್ರಾಯ ಪಟ್ಟರು.

ಎಂ.ಬಿ.ಎ. ವಿದ್ಯಾರ್ಥಿಗಳು ಕೇವಲ ಸೇಲ್ಸ್ ಮ್ಯಾನ್ ಆಗುವ ಗುರಿ ಹೊಂದಿದರೆ, ಈ ಶಿಕ್ಷಣ ಪಡೆಯುವುದಕ್ಕೆ ಅರ್ಥವಿರುವುದಿಲ್ಲ. ಉನ್ನತ ಹಂತದ ಉದ್ಯೋಗಗಳ ಗುರಿ ಹೊಂದುವುದು ಅನಿವಾರ್ಯ. ಇದಕ್ಕಾಗಿ ಕಠಿಣ ಸವಾಲುಗಳಿಗೆ ಹಿಂಜರಿಯಬಾರದು ಎಂದವರು ಕಿವಿಮಾತು ಹೇಳಿದರು.

ಬ್ರಿಟನ್‌ನ ಲಂಡನ್ ಸೌತ್ ಬ್ಯಾಂಕ್ ವಿಶ್ವವಿದ್ಯಾಲಯದ ಉಪನ್ಯಾಸಕರಾದ ಲೆಬರ್ನ್ ರೋಸ್ ಮಾತನಾಡಿ, ಎಂ.ಬಿ.ಎ. ವಲಯದವರ ಸಣ್ಣ ಬದಲಾವಣೆಗಳೂ ತಮ್ಮದೇ ಆದ ರೀತಿಯಲ್ಲಿ ದೇಶಕ್ಕೆ ಕೊಡುಗೆ ನೀಡುತ್ತವೆ. ಲಂಡನ್ ವಿಶ್ವವಿದ್ಯಾಲಯದಲ್ಲಿ ನಾನು ಆರಂಭಿಸಿದ ಹೊಸ ಕೋರ್ಸ್ ಹಲವರ ಜೀವನ ಬದಲಿಸಿತ್ತು ಎಂದು ಹೇಳಿದರು.

ಬ್ರಿಟನ್‌ನ ಲಂಡನ್ ಸೌತ್ (5ನೇ ಪುಟಕ್ಕೆ)

## ಅಡಿಕೆ ಮರಗಳನ್ನು ಕಡಿದು ಸುಟ್ಟು ಹಾಕಿದ ರೈತ

### ಗಾಳಿ, ಮಳೆಗೆ ಧರೆಗುರುಳಿದ ಅಡಿಕೆ ಮರಗಳು : ಮಾಯಕೊಂಡ ಶಾಸಕ ಬಸವಂತಪ್ಪ ಭೇಟಿ

ದಾವಣಗೆರೆ, ಮೇ 14 - ಮಾಯಕೊಂಡ ಕ್ಷೇತ್ರದ ವ್ಯಾಪ್ತಿಯಲ್ಲಿ ಸುರಿದ ಮಳೆ, ಗಾಳಿಗೆ ಬೆಳೆ ಹಾನಿಯಾದ ತೋಟಗಳಿಗೆ ಶಾಸಕ ಕೆ.ಎಸ್. ಬಸವಂತಪ್ಪ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸೋಮವಾರ ರಾತ್ರಿ ಮಳೆ, ಗಾಳಿಗೆ ತಾಲ್ಲೂಕಿನ ಅಣಬೇರು ಗ್ರಾಮದ ರೈತರ ಅಡಿಕೆ ತೋಟಗಳಲ್ಲಿ ಫಲಕ್ಕೆ ಬಂದ ಸುಮಾರು 150 ರಿಂದ 200 ಅಡಿಕೆ ಮರಗಳು ಧರೆಗುರುಳಿವೆ. ಹಾನಿಗೊಳಗಾದ ತೋಟಗಳಿಗೆ ಶಾಸಕ ಕೆ.ಎಸ್. ಬಸವಂತಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿ, ರೈತರ ಸಮಸ್ಯೆ ಆಲಿಸಿದರು.

ಈ ಸಂದರ್ಭದಲ್ಲಿ ಮಳೆ, ಗಾಳಿಗೆ ಅಡಿಕೆ ಮರಗಳು ನೆಲಕ್ಕುರುಳಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಸರ್ಕಾರದಿಂದ ಪರಿಹಾರ ಕೊಡಿಸುವಂತೆ ರೈತರು ಶಾಸಕರಿಗೆ ಮನವಿ ಮಾಡಿದರು. ತೋಟಗಳಿಗೆ ಭೇಟಿ ನೀಡಿ ಮಳೆ, ಗಾಳಿಗೆ ಹಾನಿಯಾಗಿರುವ ಬೆಳೆ ವರದಿ ತಯಾರಿಸಿ, ಸರ್ಕಾರ ಸಲ್ಲಿಸುವ ಮೂಲಕ ಪರಿಹಾರ ವಿತರಣೆಗೆ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರವಾಣಿ ಸಂಪರ್ಕಿಸಿ, ಸೂಚನೆ ನೀಡಿದರು.

ಕ್ಷೇತ್ರದ ರೈತರು ಬೆಳೆ ವಿಮೆ ಕಟ್ಟಿದ್ದಾರೆ. ಆದರೆ ಈ ಬಾರಿ ಬರಗಾಲ ಎದುರಾಗಿ ರೈತರು ಕಂಗಾಲಾಗಿದ್ದರೂ ಕೆಲವು ಗ್ರಾ.ಪಂ.ಗಳ ವ್ಯಾಪ್ತಿಯಲ್ಲಿ ವಿಮೆ ಪಾವತಿಸಿದರೆ, ಇನ್ನು ಕೆಲವು ಗ್ರಾಪಂಗಳಲ್ಲಿ ವಿಮೆ ಪಾವತಿಸಿಲ್ಲ. ಈಗ ಗಾಳಿ,



ಮಳೆಗೆ ಬೆಳೆ ಹಾನಿಯಾಗಿರುವ ರೈತರು ಬೆಳೆ ವಿಮೆ ಕಟ್ಟಿದ್ದು, ಕೂಡಲೇ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಂದ ಬೆಳೆ ಹಾನಿ ವರದಿ ತರಿಸಿಕೊಂಡು ಬೆಳೆ ವಿಮೆ ಪಾವತಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು. ಬಳಿಕ ಗ್ರಾಮದ ಶಿಥಿಲಗೊಂಡ ಸರ್ಕಾರಿ ಪ್ರೌಢ ಶಾಲೆಗೆ ಭೇಟಿ ನೀಡಿದ ಶಾಸಕರು, ಪರಿಶೀಲನೆ ನಡೆಸಿದರು. ಶಾಲೆಯ ಕೊಠಡಿಗಳಲ್ಲಿ ಶಿಥಿಲಗೊಂಡು ಆರ್.ಸಿ.ಸಿ.ಯ ಚಕ್ಕಳ ಕಿತ್ತುಕೊಂಡಿದೆ. ಇದರಿಂದ ಮಳೆ ಬಂದಾಗ ಸೋರುತ್ತಿವೆ ಎಂದು ಗ್ರಾಮಸ್ಥರು ಶಾಸಕರಿಗೆ ಸಮಸ್ಯೆ ಬಿಚ್ಚಿಟ್ಟರು.

ಇದೇ ಸಂದರ್ಭದಲ್ಲಿ ಶಾಲೆಯ ಆವರಣದಲ್ಲಿ ಸುಮಾರು 15 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಹೈಟೆಕ್ ಶೌಚಾಲಯವನ್ನು ಶಾಸಕ ಕೆ.ಎಸ್. ಬಸವಂತಪ್ಪ ಪರಿಶೀಲಿಸಿದರು. ಈ ವೇಳೆ ಹೈಟೆಕ್ ಶೌಚಾಲಯ ನಿರ್ಮಾಣ ಕಾಮಗಾರಿ ಕಳಪೆ ಆಗಿರುವುದನ್ನು ಕಂಡು ಗುತ್ತಿಗೆದಾರನ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಸಂಬಂಧಪಟ್ಟ ಅಧಿಕಾರಿಗಳಿಗೆ ಕಳಪೆ ಕಾಮಗಾರಿ ಕುರಿತು ಮಾಹಿತಿ ನೀಡಿ, ಗುಣಮಟ್ಟದ ಕಾಮಗಾರಿ ನಡೆಸಲು ಗುತ್ತಿಗೆದಾರನಿಗೆ ಸೂಚನೆ ನೀಡಬೇಕು. ಕಳಪೆ ಮಾಡಿರುವ ಗುತ್ತಿಗೆದಾರನ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡುವುದಾಗಿ ತಿಳಿಸಿದ್ದಾರೆ. (5ನೇ ಪುಟಕ್ಕೆ)

## ಹಳೇದೇವರ ಹೊನ್ನಾಳಿ ಗ್ರಾಮದಲ್ಲಿ ರಾಮಾನುಜಾಚಾರ್ಯರ ರಥೋತ್ಸವ



ಹೊನ್ನಾಳಿ, ಮೇ 14 - ತಾಲ್ಲೂಕಿನ ಹಳೇ ದೇವರ ಹೊನ್ನಾಳಿ ಗ್ರಾಮದಲ್ಲಿ ಶ್ರೀ ರಾಮಾನುಜಾಚಾರ್ಯರ ರಥೋತ್ಸವ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ದಾವಣಗೆರೆ, ಚಿತ್ರದುರ್ಗ, ಹಾವೇರಿ ಜಿಲ್ಲೆಗಳು ಸೇರಿದಂತೆ, ರಾಜ್ಯದ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿದ್ದರು.

ಬಾಳೆಕಂದು, ಅಡಿಕೆ ಹಿಂಗಾರ, ವಿವಿಧ ಹೂವುಗಳಿಂದ, ಪುಷ್ಪಮಾಲಿಕೆಗಳಿಂದ ರಥವನ್ನು ಭರ್ಜರಿಯಾಗಿ ಅಲಂಕರಿಸಲಾಗಿತ್ತು. ಗ್ರಾಮದ ಪ್ರಮುಖ ಬೀದಿಯಲ್ಲಿ ರಥ ಹರಿಯಿತು. ದೇವಸ್ಥಾನದ ಬಳಿ ರಥದ ಚಕ್ರಗಳಿಗೆ ತೆಂಗಿನಕಾಯಿ ಒಡೆದು ಭಕ್ತಿ ಸಮರ್ಪಿಸಿದರು.

ವೈಷ್ಣವ ಸಮಾಜದ ದಾವಣಗೆರೆ ಜಿಲ್ಲಾಧ್ಯಕ್ಷ ಮಲೇಕುಂಬಳೂರು ಕೆ. ಆರ್. ವರದರಾಜಪ್ಪ, ಹಳೇದೇವರ ಹೊನ್ನಾಳಿ ಗ್ರಾಮದ ಶ್ರೀ ರಾಮಾನುಜಾಚಾರ್ಯರ ಮಠದ ಅಧ್ಯಕ್ಷ ಎಸ್.ಕೆ. ಗೋಪಾಲಯ್ಯ, ಹೊಸ ದೇವರ ಹೊನ್ನಾಳಿ ಎಂ.ಎಸ್. ರಮೇಶ್ ಸೇರಿದಂತೆ, ಅನೇಕರು ಇದ್ದರು.

## ವಾಸ್ಕೋ ರೈಲು ಬೆಂಗಳೂರಿಗೆ ವಿಸ್ತರಿಸಿ



ದಾವಣಗೆರೆ, ಮೇ 14 - ಹುಬ್ಬಳ್ಳಿ ಮತ್ತು ದಾವಣಗೆರೆ ಮಾರ್ಗವಾಗಿ ವಾಸ್ಕೋದಿಂದ ಯಶವಂತಪುರ ಹೋಗುವ ರೈಲು ಗಾಡಿಯನ್ನು ಬೆಂಗಳೂರಿನ ವರೆಗೆ ವಿಸ್ತರಿಸಿ, ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ಆಗಿ ಪರಿವರ್ತಿಸುವಂತೆ ನೈರುತ್ಯ ರೈಲ್ವೆ ವಲಯದ ಪ್ರಯಾಣಿಕರ ಸಂಘ ಒತ್ತಾಯಿಸಿದೆ. 17309-17310 ಸಂಖ್ಯೆಯ 2 ರೈಲುಗಳು ತಮ್ಮ ಸೇವೆಯನ್ನು ಬೆಂಗಳೂರು ವರೆಗೆ ವಿಸ್ತರಿಸಿಕೊಂಡರೆ ಸರ್ಕಾರಿ ಕೆಲಸಕ್ಕೆ ತೆರಳುವ ಹರಿಹರ ಮತ್ತು ದಾವಣಗೆರೆ ಭಾಗದ ಜನರಿಗೆ ಅನುಕೂಲವಾಗುತ್ತದೆ ಎಂದು ನೈಋತ್ಯ ರೈಲ್ವೆ ಅಧಿಕಾರಿಗಳಿಗೆ ಸಂಘದ ಕಾರ್ಯದರ್ಶಿ ರೋಹಿತ್ ಎಸ್. ಜೈನ್ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

### ಹರಪನಹಳ್ಳಿ ತಾಲ್ಲೂಕು ಹಲುವಾಗಲು ಮತ್ತು ಕಣವಿ ಗ್ರಾಮಗಳಲ್ಲಿ ಸಂಭ್ರಮ

# 66 ಹಳ್ಳಿಯ ಒಡತಿ ಶ್ರೀ ಊರಮ್ಮ ದೇವಿಯ ಜಾತ್ರಾ ಮಹೋತ್ಸವ

ಹರಪನಹಳ್ಳಿ, ಮೇ 14 - ತಾಲ್ಲೂಕಿನ ಹಲುವಾಗಲು ಮತ್ತು ಕಣವಿ ಗ್ರಾಮಗಳ ಗ್ರಾಮ ದೇವತೆ, 66 ಹಳ್ಳಿಯ ಒಡತಿ ಶ್ರೀ ಊರಮ್ಮ ದೇವಿಯ ಜಾತ್ರಾ ಮಹೋತ್ಸವ ಐದು ದಿನಗಳ ಕಾಲ ಅತ್ಯಂತ ವಿಜೃಂಭಣೆಯಿಂದ ಜರುಗಲಿದೆ.

ಇಂದು ಬೆಳಿಗ್ಗೆ 8 ಗಂಟೆಗೆ ದೇವಿಯ ಅಲಂಕಾರ, ಪುಷ್ಪಾರ್ಚನೆ, 9 ಗಂಟೆಗೆ ದೃಷ್ಟಿ ಇಡುವುದು, ಮಾಂಗಲ್ಯಧಾರಣೆ, ಪೂಜೆ, 11 ಗಂಟೆಗೆ ಉಡಿ ತುಂಬುವ ಕಾರ್ಯಕ್ರಮ, ರಾತ್ರಿ 10 ಗಂಟೆಗೆ ಗ್ರಾಮದೊಳಗೆ ದೇವಿಯು ಸಕಲ ವಾದ್ಯಗಳೊಂದಿಗೆ ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯೊಂದಿಗೆ ಚೌತಿಮನೆ ಕಟ್ಟಿಗೆ ಪ್ರತಿಷ್ಠಾಪನೆಗೊಳ್ಳುವ ಕಾರ್ಯಕ್ರಮ ನೆರವೇರಿತು.

ನಾಳೆ ದಿನಾಂಕ 15ರ ಬುಧವಾರ ಬೆಳಿಗ್ಗೆ 6 ಗಂಟೆಗೆ ಗ್ರಾಮದ ಸುತ್ತ ಚರಗ ಹೊಡೆಯುವುದು, ದೇವಿಯ ಸನ್ನಿಧಿಯಲ್ಲಿ ರಾಣಿಗರಿಂದ ವಿವಿಧ ವಿನೋದಾವಳಿಗಳು, ಶ್ರೀದೇವಿಯ ಗುಣಗಾನ, ಹಾಸ್ಯಗಾರರಿಂದ ನರ್ತನ, ಸಂಜೆ 4 ಗಂಟೆಗೆ ರೈತರಿಗೆ ಹುಲುಸು ಕೊಡುವುದು, ರಾತ್ರಿ 9 ಗಂಟೆಗೆ ರಸಮಂಜರಿ ಕಾರ್ಯಕ್ರಮ ಜರುಗುವುದು.

ದಿನಾಂಕ 16 ರಂದು ಶ್ರೀದೇವಿಯ ಸ್ತೋತ್ರ, ಮಧ್ಯಾಹ್ನ 3 ಗಂಟೆಗೆ ಬನ್ನಿ ಮಂಟಪಕ್ಕೆ ದೊಡ್ಡ ಬಂಡಿ ರಥದ ಮೂಲಕ ಸಕಲ ವಾದ್ಯಗಳೊಂದಿಗೆ ಮೆರವಣಿಗೆ ಮೂಲಕ ಗಡಿ ಜಾತ್ರೆಗೆ ಹೋಗುವುದು, ನಂತರ ಬನ್ನಿ ಮಂಟಪದಲ್ಲಿ ಶ್ರೀದೇವಿಯು ಗ್ರಾಮಸ್ಥರಿಗೆ ಅಭಯ ಕೊಡುವುದು.

ದಿನಾಂಕ 17 ರಂದು ಬೆಳಿಗ್ಗೆ 9 ಗಂಟೆಗೆ ಶ್ರೀದೇವಿಗೆ ಪುಷ್ಪಾರ್ಚನೆ ಮತ್ತು ಮಹಾ ಮಂಗಳಾರತಿ ನೆರವೇರುವುದು.



ದೇವಿಗೆ ಮುಡಿಪು, ಕಾಣಿಕೆ ಸಲ್ಲಿಸುವವರು ಊರಮ್ಮದೇವಿ ಸಮಿತಿಯವರಿಗೆ ಒಪ್ಪಿಸಿ, ರಸೀದಿ ಪಡೆಯಬೇಕು ಎಂದು ಜಾತ್ರಾ ಸಮಿತಿಯವರು ತಿಳಿಸಿದ್ದಾರೆ.

ಗ್ರಾಮದಲ್ಲಿ 9 ವರ್ಷಗಳ ನಂತರ ನಡೆಯು ತ್ತಿರುವ ಊರಮ್ಮ ದೇವಿಯ ಜಾತ್ರಾ ಮಹೋತ್ಸವಕ್ಕೆ ಎಲ್ಲಾ ರೀತಿಯ ಸಿದ್ದತೆ ಕೈಗೊಳ್ಳಲಾಗಿದೆ, ಗ್ರಾಮದ ನಿಜಲಿಂಗಪ್ಪ ರಂಗಮಂದಿರದಲ್ಲಿ ಬೃಹತ್ ಆಕಾರದ ಮಹಾದ್ವಾರ ನಿರ್ಮಿಸಲಾಗಿದ್ದು, ನೋಡುಗರ ಗಮನ ಸೆಳೆಯುತ್ತಿದೆ, ಗ್ರಾಮವು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದು, ಊರಲ್ಲಿ ಸಂಭ್ರಮ ಮನೆ ಮಾಡಿದೆ.

ಹೀಗೆ ಹಲುವಾಗಲು, ಕಣವಿ, ಗರ್ಭಗುಡಿ ಸೇರಿದಂತೆ, ಸುತ್ತಮುತ್ತಲ ಗ್ರಾಮಸ್ಥರು ಅತ್ಯಂತ ಸಂಭ್ರಮದಿಂದ ಜನಪದ ಸೊಗಡಿನ ಊರಮ್ಮದೇವಿ ಜಾತ್ರೆಯನ್ನು ಆಚರಿಸುತ್ತಿದ್ದಾರೆ.

**66 ಹಳ್ಳಿಯ ಒಡತಿಯ ಇತಿಹಾಸ**

ಮಲೆನಾಡಿನ ತುಂಗಭದ್ರಾ ನದಿಯಲ್ಲಿ ಕಟ್ಟಿಗೆಯಿಂದ ಸೃಷ್ಟಿಸಿದ ಎರಡು ದೇವತೆಗಳುಳ್ಳ ಪೆಟ್ಟಿಗೆಯೊಂದು ತೇಲುತ್ತಾ ಬಂದು ಗರ್ಭಗುಡಿ ಗ್ರಾಮದ ನದಿ ತಟದಲ್ಲಿ ನಿಂತಾಗ, ಬಡಿಗೇರ ವ್ಯಕ್ತಿಯೊಬ್ಬ ಮೀನುಗಾರರ ಸಹಾಯದಿಂದ ಅದನ್ನು ದಡಕ್ಕೆ ತರುತ್ತಾನೆ. ನಂತರ ದನ ಕಾಯುವ ಹುಡುಗನ ಮೈಯಲ್ಲಿ ದೇವಿ ಮೈದುಂಬಿ ತನ್ನ ಇತಿಹಾಸ ತಿಳಿಸುತ್ತಾಳೆ.

ಆಗ ಗರ್ಭಗುಡಿ ಗ್ರಾಮದಲ್ಲಿ ಮೊದಲನೇ ಪೂಜೆ ನಡೆಯುತ್ತದೆ, ಆದ್ದರಿಂದ ಗರ್ಭಗುಡಿ ಗ್ರಾಮವೇ ದೇವಿಯ ತವರು ಮನೆ ಎಂದು ಹಿರಿಯರ ಹೇಳಿಕೆಯಾಗಿದೆ.

ಗರ್ಭಗುಡಿ ಗ್ರಾಮದಿಂದ ದೇವಿಮೂರ್ತಿ ಯುಳ್ಳ ಪೆಟ್ಟಿಗೆ ಕಳ್ಳತನವಾಗಿ, ದಾವಣಗೆರೆ ತಾಲ್ಲೂಕಿನ ಮಾಗಾನಹಳ್ಳಿ ಮತ್ತು ಬೇತೂರು ಸಮೀಪದ ಗಡಿ ಬೇವಿನಮರದ ಸ್ಥಳದಲ್ಲಿ ಇರುತ್ತದೆ. ಆಗ ಮಾಗಾನಹಳ್ಳಿ ಮತ್ತು ಬೇತೂರು ಗ್ರಾಮದವರು ಇದು ನಮ್ಮದೆಂದು ವ್ಯಾಜ್ಯ ಮಾಡಿದಾಗ ಬಾಲಕನೊಬ್ಬನ ಮೈಯಲ್ಲಿ ಅವತರಿಸಿದ ದೇವಿ ನಾನು ಗರ್ಭಗುಡಿ ಗ್ರಾಮದ ಮಗಳೆಂದು ಹೇಳುತ್ತಾಳೆ. ನಂತರ ಮಾಗಾನಹಳ್ಳಿ ಮತ್ತು ಗರ್ಭಗುಡಿ, ಇತರರು ನಮಗೆ ಸೇರಿದ ದೇವಿ ಎಂದು ವಾದ ಮಾಡುತ್ತಿರುವಾಗ, ಅಂತಿಮವಾಗಿ ನಾನು ಎಲ್ಲಿಯೂ ಇರುವುದಿಲ್ಲ 66 ಹಳ್ಳಿಗಳ ಒಡತಿ. ನನ್ನ ಕರೆದು ಎಲ್ಲರೂ ಪೂಜೆ ಪುನಸ್ಕಾರ ಮಾಡಿರೆಂದು ಹೇಳುತ್ತಾಳೆ. ಅಲ್ಲಿಂದ ಇಲ್ಲಿಯವರೆಗೂ ಯಾವ ವಾಹನವಿಲ್ಲದೆ ದೇವಿಯನ್ನು ತಲೆಯ ಮೇಲೆ ಹೊತ್ತು ನಡೆದು ಕೊಂಡೇ ಊರಿಂದೂರಿಗೆ ಹೋಗಲಾಗುತ್ತದೆ. ಹೀಗೆ ಜನಪದ ಕಥೆಯನ್ನು ಹಲುವಾಗಲು ಸಣ್ಣಿಂಗಪ್ಪ ಎನ್ನುವವರು ಹೇಳುತ್ತಾ ಹೋಗುತ್ತಾರೆ.

ಮಾಗಾನಹಳ್ಳಿ ಗ್ರಾಮದಿಂದ ಹಲುವಾಗಲು ಬಳಿ ಇರುವ ಗರ್ಭಗುಡಿ ಗ್ರಾಮದವರೆಗೆ 66 ಹಳ್ಳಿಗಳಲ್ಲಿ ಈ ದೇವಿಯ ಭಕ್ತರಿದ್ದಾರೆ. ಗರ್ಭಗುಡಿ ದೇವಿಯ ತವರು ಮನೆಯಾದರೆ, ಹರಿಹರ ಗಂಡನ ಮನೆ ಎನಿಸಿಕೊಂಡಿದೆ.

ಇಂತಹ ಜನಪದ ಇತಿಹಾಸವುಳ್ಳ ಊರಮ್ಮದೇವಿ ಜಾತ್ರೆಯನ್ನು ಹಲುವಾಗಲು ಗ್ರಾಮದಲ್ಲಿ ಮೇ 13 ರಿಂದ 17 ರವರೆಗೆ ವಿಜೃಂಭಣೆಯಿಂದ ಆಚರಿಸಲಾಗುತ್ತದೆ.

## ಹರಪನಹಳ್ಳಿ ತಾಲ್ಲೂಕು ಆಡಳಿತ ಭವನದಲ್ಲಿ ಬಸವ ಜಯಂತಿ



ಹರಪನಹಳ್ಳಿ, ಮೇ 14 - ತಾಲ್ಲೂಕು ಆಡಳಿತ ಭವನದಲ್ಲಿ ಶುಕ್ರವಾರ ಜಗಜ್ಯೋತಿ ಬಸವೇಶ್ವರ ಹಾಗೂ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಆಚರಿಸಲಾಯಿತು. ಈ ವೇಳೆ ಸಹಾಯಕ ಆಯುಕ್ತ ಚಿದಾನಂದ ಸ್ವಾಮಿ, ತಹಶೀಲ್ದಾರ್ ಬಿ. ಗಿರೀಶ್ ಬಾಬು, ಪಂಚಮಸಾಲಿ ಸಮಾಜದ ಅಧ್ಯಕ್ಷ ಪಿ. ಬೆಟ್ಟನಗೌಡ್ರು, ಪುರಸಭೆ ಸದಸ್ಯ ಗೊಂಗಡಿ ನಾಗರಾಜ್, ಮುಖಂಡರಾದ ಟಿ.ಎಚ್.ಎಂ ಮಲ್ಲಿಕಾರ್ಜುನಯ್ಯ, ಪೂಜಾರ ಬಸವರಾಜ್, ಅಂಬ್ಲಿ ಮಂಜುನಾಥ್, ಪ್ರಭಾಕರ್, ಜೆ. ನಟರಾಜ್ ಸೇರಿದಂತೆ ಇತರರಿದ್ದರು.

## ರಂಗಭೂಮಿ ತರಬೇತಿಗೆ ಅರ್ಜಿ

ದಾವಣಗೆರೆ, ಮೇ 14 - ನಟನ ರಂಗಶಾಲೆಯು ಒಂದು ವರ್ಷದ ರಂಗಭೂಮಿ ಡಿಪ್ಲೋಮಾ ಅಭಿನಯ ಮತ್ತು ರಂಗ ತರಬೇತಿಗೆ ಅರ್ಜಿ ಆಹ್ವಾನಿಸಿದೆ.

16ರಿಂದ 30ವರ್ಷ ವಯೋಮಿತಿ ಹೊಂದಿರುವ ಅರ್ಹ ಅಭ್ಯರ್ಥಿಗಳು ನಟನ ರಂಗಶಾಲೆಯ ಕಚೇರಿಯಲ್ಲಿ ಅಥವಾ ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಅರ್ಜಿಯನ್ನು ಪಡೆಯಬಹುದು.

ಸಂದರ್ಶನ (ಆಡಿಷನ್) 19ರಂದು ನಟನ ರಂಗಶಾಲೆಯಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ಮೊ: ಸಂಖ್ಯೆ 7259537777, 9480468327.

## ಹೊಳೆಸಿರಿಗೆರೆ : ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆ

ಮಲೇಬೆನ್ನೂರು, ಮೇ 14 - ಹೊಳೆಸಿರಿಗೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಸೋಮವಾರ ಗ್ರಾಮದಲ್ಲಿ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನವನ್ನು ಮಕ್ಕಳಿಗೆ ಜಂತು ಹುಳುಗಳ ಮಾತ್ರೆ ಹಾಕುವ ಮೂಲಕ ಆಚರಿಸಲಾಯಿತು.



ಈ ವೇಳೆ ಮಾತನಾಡಿದ ಟಿಹೆಚ್‌ಓ ಡಾ. ಅಬ್ದುಲ್ ಖಾದರ್ ಅವರು, 1 ರಿಂದ 19 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೂ ಜಂತು ಹುಳುಗಳ ಮಾತ್ರೆಯನ್ನು ಕಡ್ಡಾಯವಾಗಿ ಹಾಕಲು ತಿಳಿಸಿದರು. ಜಂತುಹುಳುಗಳನ್ನು ಜಂತುಹುಳು ನಾಶಕದಿಂದ ನಿವಾರಣೆ ಮಾಡುವುದಷ್ಟೇ ಅಲ್ಲದೇ, ಇತರೆ ಆಚರಣೆಗಳ ಮೂಲಕ ನಿಯಂತ್ರಿಸಬಹುದು. ನಿಮ್ಮ ಊರು, ಕೇರಿಗಳನ್ನು ಮತ್ತು ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಯಾವಾಗಲೂ ಶುದ್ಧ ನೀರನ್ನು ಕುಡಿಯಿರಿ, ಬರಿಗಾಲಿನಲ್ಲಿ ನಡೆಯಬೇಡಿ, ಚಪ್ಪಲಿಗಳನ್ನು ಧರಿಸಿ, ಆಹಾರವನ್ನು ಮುಚ್ಚಿಡಿ, ಬಯಲಿನಲ್ಲಿ ಮಲ ವಿಸರ್ಜನೆ ಮಾಡಬೇಡಿ, ಶೌಚಾಲಯವನ್ನು ಬಳಸಿ, ಹಣ್ಣು ಮತ್ತು ತರಕಾರಿಗಳನ್ನು ಶುದ್ಧ ನೀರಿನಿಂದ ತೊಳೆದು ಬಳಸಬೇಕು. ಆಹಾರ ಸೇವಿಸುವ ಮೊದಲು ನಿಮ್ಮ ಕೈಗಳನ್ನು ಸಾಬೂನಿನಿಂದ ತೊಳೆದುಕೊಳ್ಳಿ ಎಂದು ಡಾ. ಖಾದರ್ ತಿಳಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರದ ಡಾ. ಚೇತನ್, ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ, ಆರೋಗ್ಯ ಸುರಕ್ಷಣಾಧಿಕಾರಿ ಆಶಾರಾಣಿ, ಆಶಾ ಕಾರ್ಯಕರ್ತೆಯರಾದ ಮಾಲಾಶ್ರೀ, ನೀಲಾಂಬಿಕ ಹಾಗೂ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಭಾಗವಹಿಸಿದ್ದರು.

# ಮಹಾನಗರ ಪಾಲಿಕೆಯಲ್ಲಿ ವಯೋ ನಿವೃತ್ತಿ ಸಿಬ್ಬಂದಿಗಳಿಗೆ ಆತ್ಮೀಯ ಬೀಳ್ಕೊಡುಗೆ



ದಾವಣಗೆರೆ, ಮೇ 14 - ಮಹಾನಗರ ಪಾಲಿಕೆಯ ನೌಕರರಾದ ಕೆ. ಗಂಗಪ್ಪ ಮತ್ತು ಓಂಕಾರ್ ಮೂರ್ತಿ ಅವರು ಸೇವೆಯಿಂದ ವಯೋ ನಿವೃತ್ತಿಯಾಗಿದ್ದು, ಮಹಾನಗರ ಪಾಲಿಕೆಯ ನೌಕರರ ಸಂಘ ಮತ್ತು ಪಾಲಿಕೆ ಸಿಬ್ಬಂದಿಗಳು ಪಾಲಿಕೆ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಅವರನ್ನು ಬೀಳ್ಕೊಡಲಾಯಿತು.

ನಿವೃತ್ತ ನೌಕರರನ್ನುದ್ದೇಶಿಸಿ ಮಾತನಾಡಿದ ಸಿಬ್ಬಂದಿಗಳು, ಎಸ್‌ಎಫ್‌ಸಿ ವೇತನ ಆಯೋಗ ರಚಿಸಲು ರಾಜ್ಯ ವ್ಯಾಪಿ ಮುಷ್ಕರ ನಡೆದ ಸಂದರ್ಭದಲ್ಲಿ ಬಲಗೈಗೆ ಬೆಂಕಿ ತಗಲಿ ಆಸ್ಪತ್ರೆಗೆ ದಾಖಲಾಗಿದ್ದರೂ ಆರೋಗ್ಯ ಲೆಕ್ಕಿಸದೇ ಹೋರಾಟಕ್ಕೆ ದುಮುಕಿದ್ದರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಂತಹ ನಿಷ್ಠಾವಂತ ನೌಕರರ ಮುಷ್ಕರದ ಫಲವಾಗಿ ಕೆಲವು ತಿಂಗಳ ನಂತರ ಸರ್ಕಾರ ಎಸ್‌ಎಫ್‌ಸಿ ರಾಜ್ಯ ಹಣಕಾಸು ಆಯೋಗ ರಚನೆಯಾಯಿತು ಎಂದು ಸ್ಮರಿಸಿದರು.


ಅಂದು ಹೋರಾಟ ಮಾಡಿದ ಪ್ರಾಮಾಣಿಕ ನೌಕರರ ಹೋರಾಟದ ಪ್ರತಿಫಲದಿಂದ ನಾವೆಲ್ಲರೂ ಪ್ರತಿ ತಿಂಗಳು ನಿಶ್ಚಿಂತೆಯಿಂದ ವೇತನ ಪಡೆಯುತ್ತಿದ್ದೇವೆ. ಇಂತಹ ಮುಷ್ಕರಗಳು ಈಗಿನ ಯುವಕರಿಗೆ ಮಾದರಿಯಾಗಬೇಕು ಎಂದು ಕರೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಕೆಲಸದ ಒತ್ತಡಗಳು ಹೆಚ್ಚಾಗುತ್ತಿರುವುದರಿಂದ ನೌಕರರು ತಮ್ಮ ವಯೋ ಸಹಜ ನಿವೃತ್ತಿಯನ್ನು ಪೂರೈಸುವುದೇ ಒಂದು ದೊಡ್ಡ ಸಾಧನೆ. ಇವರನ್ನು ನೋಡಿದರೆ 60 ವರ್ಷ ಪೂರೈಸಿದ್ದಾರೆ ಎಂಬುದೇ ಆಶ್ಚರ್ಯ ಎಂದು ಶ್ಲಾಘಿಸಿದರು.

ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್, ಸಂಘಟನಾ ಕಾರ್ಯದರ್ಶಿ ಎಸ್.ಕೆ. ಪಾಂಡುರಾಜ್, ಎಂ. ಗೋವಿಂದ ನಾಯಕ್, ನಾಗರಾಜ್, ನವೀನ್, ಟಿ.ಸಿ. ಬಸವರಾಜಯ್ಯ, ಗುರುಮೂರ್ತಿ, ಟಿ.ಸಿ. ಅಸ್ಲಂ, ರಘು, ಅರುಣ್ ಕುಮಾರ್, ಜಯಣ್ಣ, ಸಂಘದ ಪದಾಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ನೀರಿಲ್ಲದೆ ಒಣಗಿರುವ ಬೆಳೆಗೆ ಪರಿಹಾರ ಘೋಷಣೆಗೆ ಸತೀಶ್ ಆಗ್ರಹ

ದಾವಣಗೆರೆ, ಮೇ 14 - ತಾಲ್ಲೂಕಿನ ಕುಕ್ಕುವಾಡ ಗ್ರಾಮದಲ್ಲಿರುವ ದಾವಣಗೆರೆ ಸಕ್ಕರೆ ಕಂಪನಿ ವ್ಯಾಪ್ತಿಯಲ್ಲಿ ನೂರಾರು ಎಕರೆಯಲ್ಲಿ ಬೆಳೆದಿರುವ ಕಬ್ಬು, ಅಡಿಕೆ, ತೆಂಗಿನ ತೋಟಗಳು ನೀರಿಲ್ಲದೆ ಬಿರು ಬೇಸಿಗೆಯಿಂದ ಒಣಗಿವೆ. ಇದರಿಂದ ರೈತರು ತೀವ್ರ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದು, ಜೀವನ ನಡೆಸುವುದು ಬಹಳ ಕಷ್ಟವಾಗಿದೆ. ಸರ್ಕಾರ ಒಣಗಿರುವ ಬೆಳೆ ಸಮೀಕ್ಷೆ ನಡೆಸಿ ಪರಿಹಾರ ನೀಡಬೇಕು ಎಂದು ರೈತ ಮುಖಂಡ ಕೋಳೇನಹಳ್ಳಿ ಬಿ.ಎಂ. ಸತೀಶ್ ಆಗ್ರಹಿಸಿದ್ದಾರೆ.



ಅವೈಜ್ಞಾನಿಕ ವೇಳಾಪಟ್ಟಿಯಿಂದ ಭದ್ರಾ ನೀರು ಹರಿಯದಿರುವುದು ಒಂದೆಡೆಯಾದರೆ, ಬಿಸಿಲಿನ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬಿಸಿಲಿನ ಝಳಕ್ಕೆ ತತ್ತರಿಸುತ್ತಿರುವ ರೈತ, ಒಣಗಿರುವ ಬೆಳೆ ಕಂಡು ರೋಧಿಸುತ್ತಿದ್ದಾನೆ.

ಮಳೆ ಬರುತ್ತದೆ ಎಂಬ ಹವಾಮಾನ ಇಲಾಖೆ ಮುನ್ಸೂಚನೆ ನೋಡಿ ನೋಡಿ ರೈತ ಹೈರಾಣಾಗಿದ್ದಾನೆ. ಅಂತರ್ಜಲ ಮಟ್ಟ ಸಂಪೂರ್ಣ ಕುಸಿದು ಹೋಗಿದೆ.

ಕೊಳವೆ ಬಾವಿಗಳು ನೀರು ಇಲ್ಲದೆ ಬತ್ತಿ ಹೋಗಿವೆ. ಹೀಗಾಗಿ ಬೆಳೆಗಳಿಗೆ ನೀರುಣಿಸಲು ಸಾಧ್ಯವಾಗಿಲ್ಲ. ಇದರಿಂದ ಬೆಳೆ ಸಂಪೂರ್ಣ ಒಣಗಿ ಸುಟ್ಟಂತೆ ಕಾಣುತ್ತಿದೆ.

ಇತಿಹಾಸ ಕಂಡರಿಯದ ಭೀಕರ ಬರದಿಂದ ಜನರು ಕಂಗೆಟ್ಟಿದ್ದಾರೆ. ಆದ್ದರಿಂದ ರೈತರ ಇಂತಹ ಹೀನಾಯ ಪರಿಸ್ಥಿತಿಯನ್ನು ಸರ್ಕಾರ ಕಣ್ತೆರುದು ನೋಡಬೇಕು.

ರೈತರ ಜಮೀನುಗಳಿಗೆ ಭೇಟಿ ನೀಡಿ ಒಣಗಿರುವ ಮತ್ತು ಒಣಗುತ್ತಿರುವ ಬೆಳೆ ಸಮೀಕ್ಷೆ ನಡೆಸಿ, ಪರಿಹಾರ ನೀಡಬೇಕು ಎಂದು ಆಗ್ರಹಿಸಿದರು.

ನೀರಿಲ್ಲದೆ ಒಣಗಿರುವ ಕಬ್ಬಿನ ಬೆಳೆಯನ್ನು ರೈತ ಮುಖಂಡ ಕೋಳೇನಹಳ್ಳಿ ಬಿ ಎಂ ಸತೀಶ್, ಕನಗೊಂಡನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಜಲಜಾಕ್ಷಮ್ಮ ಸ್ವಾಮಿಲಿಂಗಪ್ಪ, ಕೋಳೇನಹಳ್ಳಿ ಕೆ. ಶರಣಪ್ಪ, ಎಸ್.ಸಿ. ಸಿದ್ದಪ್ಪ, ಮಂಜುನಾಥ ಗುತ್ನಾಳ, ದೊಡ್ಡಮನೆ ಹಾಲಸಿದ್ದಪ್ಪ, ಬಿ.ನಾಗೇಂದ್ರಪ್ಪ, ಕನಗೊಂಡನಹಳ್ಳಿ ಕೆ.ಎನ್. ಮಂಜುನಾಥ್ ಮುಂತಾದವರು ವೀಕ್ಷಣೆ ಮಾಡಿದರು.

## ಅನುಭವ ಮಂಟಪದಿಂದ ಸಂಸತ್ತಿನ ಅರಿವು



ದಾವಣಗೆರೆ, ಮೇ 14 - ಬಸವಣ್ಣನವರು 12ನೇ ಶತಮಾನದಲ್ಲಿಯೇ ಅನುಭವ ಮಂಟಪದ ಮೂಲಕ ಈಗಿನ ಸಂಸತ್ತಿನ ಅರಿವನ್ನು ಮೂಡಿಸಿದ್ದರು ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಹೇಳಿದರು.

ಇಲ್ಲಿನ ಕೆ.ಟಿ.ಜೆ. ನಗರದ 12ನೇ ಕ್ರಾಸ್‌ನಲ್ಲಿ ಕುರುವತ್ತಿ ಬಸವೇಶ್ವರ ದೇವಸ್ಥಾನದಲ್ಲಿ ಬಸವಣ್ಣನವರ ಪ್ರತಿಮೆಗೆ ಪೂಜೆ ಸಲ್ಲಿಸಿ ಅವರು ಮಾತನಾಡಿದರು.

ಜಗಜ್ಯೋತಿ ಬಸವಣ್ಣನವರು ಜಾತಿ, ಮತ, ಪಂಥಗಳ ಭೇದ-ಭಾವ ಅಳಿಸುವ ಜತೆಗೆ ಪುರುಷರಷ್ಟೇ ಮಹಿಳೆಯೂ ಸರಿಸಮಾನಳು ಎಂದು ಅಂದಿನ ಅನುಭವ ಮಂಟಪದಲ್ಲಿ ಸ್ತ್ರೀಗೆ ಸಮಾನ ಅವಕಾಶ ಕಲ್ಪಿಸಿದ್ದರು ಎಂದರು.

ಜವಳಿ ಸಂಗಪ್ಪ, ಕೇರಂ ಗಣೇಶ್, ಡಿ.ಎನ್. ಜಗದೀಶ್, ಕೆ.ಆರ್. ಪರಮೇಶ್ವರಪ್ಪ, ಗೋಣಪ್ಪ, ಚೇತನ್‌ಕುಮಾರ್, ಎಚ್. ನಾಗರಾಜ್, ಎಸ್. ಮಾನು, ಶಾಂತಕುಮಾರ್, ತಿಪ್ಪೇಶಿ, ಯೋಗಿ, ಗುರು, ಗೋಪಿ, ಬಿ.ಕೆ. ವೆಂಕಟೇಶ್ ಮತ್ತಿತರರಿದ್ದರು.


**ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಕಿಸಾನ್ ವರ್ಲ್ಡ್, ಹದಡಿ ರಸ್ತೆ, ವಾಣಿ ರೈಸ್ ಮಿಲ್ ಎದುರು, ದಾವಣಗೆರೆ
86603 25898

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆ ಪೂರ್ವ 30x55 ಅಕ್ಕ-ಪಕ್ಕ, 40x60 ಅಕ್ಕ-ಪಕ್ಕ 40x80, ಪಶ್ಚಿಮ 30x40, 30x50, ಬನಶಂಕರಿ ಬಡಾವಣೆ ಪೂರ್ವ 30x57 (ಅಕ್ಕ-ಪಕ್ಕ) ಪಶ್ಚಿಮ 40x70 (ಅಕ್ಕ-ಪಕ್ಕ)
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ, ಶಿವಪಾರ್ವತಿ ಗ್ಲಾಸ್ ಹೌಸ್ ಲೇಔಟ್, ಗೀತಂ ಕಾಲೇಜ್ ಹತ್ತಿರ, ಜೆ.ಹೆಚ್. ಪಟೇಲ್ ಬಡಾವಣೆ, ಹೈಟೆಕ್ ಹಿಂಭಾಗ, ಎರಗುಂಟೆ ಇನ್ವೆಸ್ಟ್ ಸೈಟ್ಸ್, ಉತ್ತಮ ದರದಲ್ಲಿ ದೊರೆಯುತ್ತವೆ. 30x40, 40x50, 40x60, 30x50 ಎಲ್ಲಾ ಅಳತೆಯ ಸೈಟ್‌ಗಳಿವೆ.
97315 12365

**ಬೋರ್‌ವೆಲ್ ಪಾಯಿಂಟ್**
ಆಧುನಿಕ ತಂತ್ರಜ್ಞಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು.
ಸಂಪರ್ಕಿಸಿ
97436 54365, 86609 98651

**ಬೇಕಾಗಿದ್ದಾರೆ**
ಪತ್ರಿಕಾ ಕಾರ್ಯಾಲಯದಲ್ಲಿ ಸಂಜೆ ಪಾಳೆಯದಲ್ಲಿ ಕನ್ನಡ ಭಾಷಾ ಜ್ಞಾನ ಹಾಗೂ ಕನ್ನಡ ಟೈಪಿಂಗ್ ಬಲ್ಲ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ : ಮಧ್ಯಾಹ್ನ 12ರ ನಂತರ
ಫೋ. : 08192 254736

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್‌ಗೆ ಬೇಕಾಗಿದ್ದಾರೆ**
ಗಂಡ-ಹೆಂಡತಿ ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 25,000 ರೂ. ಇಬ್ಬರಿಂದ ರೂಂ ಮತ್ತು ಗ್ಯಾಸ್ ಉಚಿತ.
97400 98047

**Property Hub**
- EC
- E-swathu
- Building Licence
- Khatha Change
96118 66449

**WANTED**
Helpers (Boys)
BHERAV DISTRIBUTOR
Jaydev Circle Davangere
90365-74144

**ಸೈಟುಗಳು ಮಾರಾಟಕ್ಕಿವೆ**
KHB ಕಾಲೋನಿ (Judge Quarters ಹತ್ತಿರ) ಉತ್ತರ 50x80, ಪಶ್ಚಿಮ 30x50, ಸರ್ಕಾರಿ ನೌಕರರ ಬಡಾವಣೆ ಸುತ್ತ-ಮುತ್ತ ಪೂರ್ವ 30x40, ಪಶ್ಚಿಮ 30x50, ಉತ್ತರ 30x50, ವಿದ್ಯಾನಗರ Coffee day ಸರ್ಕಲ್ ಹತ್ತಿರ ದಕ್ಷಿಣ 50x85
ಐಗೂರು ವಿಜಯಕುಮಾರ
99457 02495

**ಫ್ಲ್ಯಾಟ್ ಲೀಜ್‌ಗೆ ಇದೆ**
ದಾವಣಗೆರೆಯ ವಿದ್ಯಾನಗರದ ಕಲ್ಲೇಶ್ವರ ಅಪಾರ್ಟ್‌ಮೆಂಟ್‌ನಲ್ಲಿ 2BHK ಫ್ಲ್ಯಾಟ್ ಲೀಜ್‌ಗೆ ಇವೆ.
ಸಂಪರ್ಕಿಸಿ.
99807 28533

**House to Let**
East faced Double bed room house (1st flour) to let at SS Layout, "B" block, 3rd main, near Rishi International school
98456 99806

**ಶಾಕಿರ ಬ್ಯೂಟಿಪಾರ್ಲರ್**
ಕೆಲಸಕ್ಕೆ ಬೇಕಾಗಿದ್ದಾರೆ
ಬ್ಯೂಟಿಷಿಯನ್ ಮಹಿಳೆ - 3
ಸಹಾಯಕರು ಮಹಿಳೆ - 3
# 741/4, 10th main, P.J. Extension, Davanagere. Contact :
93420 19013

**ಮನೆಯ ಪೇಂಟಿಂಗ್**
ಮನೆಯ ಒಳಗಡೆ ಮತ್ತು ಹೊರಗಡೆ ಕಡಿಮೆ ದರದಲ್ಲಿ ಉತ್ತಮ ಪೇಂಟ್ ಮಾಡಿಕೊಡಲಾಗುವುದು.
ಮೊ : 95913 10082

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
1) ಆರ್ಡರ್ ಬುಕ್ಕಿಂಗ್ - ಪಿಯುಸಿ
2) ಬಿ.ಕಾಂ ಅಕೌಂಟ್ಸ್ / ಬಿಲ್ಲಿಂಗ್ ಜೊತೆಗೆ ಕಂಪ್ಯೂಟರ್ ಜ್ಞಾನ (ವಿವಾಹಿತ ಮಹಿಳೆಯರಿಗೆ ಆದ್ಯತೆ)
ಸ್ವವಿವರದೊಂದಿಗೆ ಸಂಪರ್ಕಿಸಿ.
ಎ.ಕೆ. ಟ್ರೇಡರ್
ಬಾಪೂಜಿ ಆಸ್ಪತ್ರೆ ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.

**ಶಿಕ್ಷಕಿಯರು ಬೇಕಾಗಿದ್ದಾರೆ**
ಜ್ಞಾನ ದೀಪ ಪಬ್ಲಿಕ್ ಸ್ಕೂಲ್
ನಿಟ್ಟುವಳ್ಳಿ, ದಾವಣಗೆರೆ - 577004.
1) BA, B.Ed, - 4. 2) Hindi B.Ed - 1. 3) B.Sc, B.Sc, B.Ed - 1. 4) PUC / B.A, D.Ed - 2. 5) NTC - 2.
94496 79346, 89710 18943

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾತಾ ವಿದ್ಯಾಸಂಸ್ಥೆ (ರಿ.). ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ ಪಾರ್ಟ್‌ಟೈಂ ಡ್ರೈವರ್ ಬೇಕಾಗಿದ್ದಾರೆ. ಹಾಗೂ ಶಾಲೆಗೆ ಆಯಾ, ಜವಾನರು ಬೇಕಾಗಿದ್ದಾರೆ. ಸಂಪರ್ಕಿಸಿ :
99640 17729

**ಮನೆ ಬಾಡಿಗೆ**
'ಸಿ' ಬ್ಲಾಕ್, 6ನೇ ಕ್ರಾಸ್, ದೇವರಾಜ್ ಅರಸ್ ಲೇಔಟ್, ದಾವಣಗೆರೆ, 2 ಬೆಡ್ ರೂಮ್ ಬೋರ್ ಮತ್ತು ಪಾಲಿಕೆ ನೀರಿನ ಸೌಲಭ್ಯ ಇರುತ್ತದೆ. ಸಂಪರ್ಕಿಸಿ :
98442 15950

**WANTED**
A.Order Booking - PUC
B.B.Com Accounts/ Billing with Computer Knowledge (Married Ladies Prefered)
Contact along with Bio Data
AK TRADERS
BAPUJI HOSPITAL ROAD PJ EXTENSION

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿರುವ ಗರ್ಭಿಣಿ ಮಹಿಳೆಯನ್ನು ಹಾರೈಕೆ ಮಾಡಲು ಹಾಗೂ ಹೆರಿಗೆಯ ನಂತರ ತಾಯಿ ಮತ್ತು ಮಗುವನ್ನು ಹಾರೈಕೆ ಮಾಡಲು ಸೂಕ್ತ ನುರಿತ ನರ್ಸಿಂಗ್ ಆಗಿರುವ ಮತ್ತು ಅನುಭವ ಇರುವ ನರ್ಸ್ ಬೇಕಾಗಿದ್ದಾರೆ. ಒಳ್ಳೆಯ ಆಕರ್ಷಕ ಸಂಬಳ ನೀಡಲಾಗುತ್ತದೆ. ಸಂಪರ್ಕಿಸಿ.
70224 60467

**ಮನೆಗಳು ಮಾರಾಟಕ್ಕಿವೆ**
SS 'B' Block ದಕ್ಷಿಣ 30x40 ಡುಪ್ಲೆಕ್ಸ್ DC ಮನೆ ಸರ್ಕಲ್ ಹತ್ತಿರ ದಕ್ಷಿಣ 30x54 (Hi-fi) (ಡುಪ್ಲೆಕ್ಸ್) ಮಹಾಲಕ್ಷ್ಮಿ ಲೇಔಟ್ ಪಶ್ಚಿಮ 30x35 (Ground floor)
ಐಗೂರು ವಿಜಯಕುಮಾರ
99457 02495

**ಬೇಕಾಗಿದ್ದಾರೆ**
ಜೆಪಿ ಎಂಟರ್‌ಪ್ರೈಸಸ್ ಸಂಸ್ಥೆಗೆ
* ಅಕೌಂಟೆಂಟ್ -1
* ಬಿಲ್ಲಿಂಗ್ ಮತ್ತು ಎಂಟ್ರಿ -1
ಫೆವಿಲಿಯನ್ ರಸ್ತೆ ದಾವಣಗೆರೆ.
97422 64091

**ಡ್ರೈವರ್, ಕಂಡಕ್ಟರ್ ಬೇಕಾಗಿದ್ದಾರೆ**
ನಗರ ಸಾರಿಗೆ ಬಸ್ಸಿಗೆ ಡ್ರೈವರ್ (ಪುರುಷ) ಮತ್ತು ಕಂಡಕ್ಟರ್ (ಪುರುಷ ಅಥವಾ ಮಹಿಳಾ) ಬೇಕಾಗಿದ್ದಾರೆ. ಸಂಪರ್ಕಿಸಿ :
91642 22937

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**WANTED TEACHERS**
Play Group, LKG, UKG with good English Fluency and 2 year Experiencce in Montessori
Little Millenium Pre-School
83100 69167

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**ಕರ್ನಾಟಕ ಮುಕ್ತ ವಿದ್ಯಾಲಯ (KOS)**
ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಶ್ವತ ಮಾನ್ಯತೆ ಪಡೆದಿದೆ
ಶಿಕ್ಷಣ ವಂಚಿತರಾದವರಿಗೆ ನೇರ ಪರೀಕ್ಷೆ
SSLC/PUC/ಪದವಿ/ಸ್ನಾತಕೋತ್ತರ ಪದವಿ & ಡಿಪ್ಲೋಮಾ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87490 24789, 87620 58369, 82173 02649

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯುಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು.
Swapna Cushion Work
Behind Vittal Temple, Maharaj Pet, Davanagere
98445 81966

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: PUC ಪಾಸ್/ಫೇಲ್, SSLC PASS
ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

# ವಾರಣಾಸಿಯಲ್ಲಿ ಮೋದಿ ನಾಮಪತ್ರ



ವಾರಣಾಸಿ, ಮೇ 14 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮೂರನೇ ಅವಧಿಗೆ ಲೋಕಸಭೆ ಪ್ರವೇಶಿಸಲು ವಾರಣಾಸಿಯಿಂದ ನಾಮಪತ್ರ ದಾಖಲಿಸಿದ್ದಾರೆ. ಈ ವೇಳೆ ಅವರೊಂದಿಗೆ ಕೇಂದ್ರ ಸಚಿವರು ಹಾಗೂ ಮುಖ್ಯಮಂತ್ರಿಗಳೂ ಸೇರಿದಂತೆ ಎನ್.ಡಿ.ಎ. ನಾಯಕರು ಉಪಸ್ಥಿತರಿದ್ದರು.

ಇದಕ್ಕೂ ಮುಂಚೆ ಪ್ರಧಾನಿ ಗಂಗಾ ತಟದ ದಶಾಶ್ವಮೇಧ ಘಾಟ್‌ನಲ್ಲಿ ಆರತಿಯಲ್ಲಿ ಪಾಲ್ಗೊಂಡಿದ್ದರು ಹಾಗೂ ಕಾಲ ಭೈರವ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆಯ ನಂತರ ರುದ್ರಾಕ್ಷ ಸಭಾಭವನಕ್ಕೆ ತೆರಳಿ ಸ್ಥಳೀಯ ಮುಖಂಡರು ಹಾಗೂ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಪ್ರಧಾನಿ ಮೋದಿ ಅವರು ನಾಲ್ಕು ಸೆಟ್‌ಗಳ ನಾಮಪತ್ರ ಸಲ್ಲಿಸಿದ್ದಾರೆ. ನಿನ್ನೆ ಪ್ರಧಾನಿ ವಾರಣಾಸಿಯಲ್ಲಿ ಬೃಹತ್ ರೋಡ್ ಶೋ ನಡೆಸಿದ್ದರು.

ಏಳನೇ ಹಂತದಲ್ಲಿ ಜೂನ್ 1ರಂದು ವಾರಣಾಸಿ ಕ್ಷೇತ್ರಕ್ಕೆ ಮತದಾನ ನೆರವೇರಲಿದೆ. ಈ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಪಕ್ಷದ ಉತ್ತರ ಪ್ರದೇಶ ರಾಜ್ಯಾಧ್ಯಕ್ಷ ಅಜಯ್ ರಾಯ್ ಕಣಕ್ಕಿಳಿದಿದ್ದಾರೆ. ಬಿ.ಎಸ್.ಪಿ.ಯಿಂದ ಅತರ್ ಜಮಲ್ ಲಾರಿ ಕಣದಲ್ಲಿದ್ದಾರೆ.

## ಪ್ರತಿಷ್ಠಿತ ಖಾಸಗಿ ಶಾಲೆಯಲ್ಲಿ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ,ಮೇ 14- ಪರಿಶಿಷ್ಟ ಜಾತಿಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಖಾಸಗಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

5ನೇ ತರಗತಿಯಲ್ಲಿ ಶೇ.60 ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾಗಿರಬೇಕು. ವಿದ್ಯಾರ್ಥಿ ಕುಟುಂಬದ ವಾರ್ಷಿಕ ವರಮಾನ ರೂ. 2 ಲಕ್ಷದೊಳಗಿರಬೇಕು. ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಫೋಟೋ ಹಾಗೂ ಅಂಕಪಟ್ಟಿ, ಗ್ರಾಮೀಣ ಪ್ರಮಾಣ ಪತ್ರಗಳೊಂದಿಗೆ ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರ ಕಚೇರಿ, ರೂಂ.ನಂ 37. ಜಿಲ್ಲಾಡಳಿತ ಭವನ, ದಾವಣಗೆರೆ ಇಲ್ಲಿಗೆ ಖುದ್ದು ಹಾಜರಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ಇದೇ ದಿನಾಂಕ 21 ಕೊನೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಮಾಜ ಕಲ್ಯಾಣ ಇಲಾಖೆ ಅಥವಾ ಆಯಾ ತಾಲ್ಲೂಕುಗಳ ಸಹಾಯಕ ನಿರ್ದೇಶಕರ ಕಚೇರಿ ಸಂಪರ್ಕಿಸಲು ಜಂಟಿ ನಿರ್ದೇಶಕ ಕೆ. ನಾಗರಾಜ ತಿಳಿಸಿದ್ದಾರೆ.

## ಮಳೆಗಾಗಿ ಪ್ರಾರ್ಥಿಸಿ ಶ್ರೀಕಾಂತ್ ರಕ್ತದಾನ



ದಾವಣಗೆರೆ, ಮೇ 14 - ರಾಜ್ಯದಲ್ಲಿ ಉತ್ತಮ ಮಳೆಗಾಗಲಿ ಎಂದು ಪ್ರಾರ್ಥಿಸಿ, ಸಾಮಾಜಿಕ ಸೇವಾ ಕಾರ್ಯಕರ್ತ ಎಂ.ಜಿ. ಶ್ರೀಕಾಂತ್ ಅವರು ಸಿದ್ದಗಂಗಾ ರಕ್ತ ಭಂಡಾರದಲ್ಲಿ ರಕ್ತ ದಾನ ಮಾಡಿದರು. ಇದು ಅವರ 14 ನೇ ರಕ್ತದಾನವಾಗಿದೆ.

## ಪ್ರಧಾನಿ ಆಸ್ತಿ ಮೌಲ್ಯ 3 ಕೋಟಿ ರೂ.

**(3ನೇ ಪುಟದಿಂದ)** ಭಾಗ ಎಸ್.ಬಿ.ಐ.ನಲ್ಲಿ ಇರಿಸಿರುವ ಸ್ಥಿರ ಠೇವಣಿಯಾಗಿದೆ. ಠೇವಣಿಯ ಮೊತ್ತ 2.85 ಕೋಟಿ ರೂ. ಆಗಿದೆ. ಮೋದಿ ಮನೆ ಸೇರಿದಂತೆ ಯಾವುದೇ ಸ್ಥಿರಾಸ್ತಿ ಹೊಂದಿಲ್ಲ. ಜಶೋದಾ ಬೆನ್, ಮೋದಿ ಅವರ ಪತ್ನಿ ಎಂದು ನಮೂದಿಸಲಾಗಿದೆ. ಅವರ ಆಸ್ತಿ ಬಗ್ಗೆ ಗೊತ್ತಿಲ್ಲ ಎಂದು ತಿಳಿಸಲಾಗಿದೆ.

## ಡಿಇಎಲ್‌ಇಡಿ ದಾಖಲಾತಿ ಪ್ರಾರಂಭ

ದಾವಣಗೆರೆ, ಮೇ 14 - ದ್ವಿತೀಯ ಪಿಯುಸಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರಥಮ ವರ್ಷದ ಡಿ.ಇಎಲ್.ಇಡಿ. ದಾಖಲಾತಿ ಕನ್ನಡ ಮತ್ತು ಉರ್ದು ಮಾಧ್ಯಮ ಪಡೆಯಲು ಆಫ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಮೇ 6 ರಿಂದ ಜೂನ್ 5 ರವರೆಗೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ,( ಡಯಟ್) ಇಲ್ಲಿ ಸಲ್ಲಿಸಬೇಕು.

ಅರ್ಜಿ ನಮೂನೆಗಳನ್ನು WWW.schooleducation.karnataka.gov.in ನಲ್ಲಿ ಡೌನ್ ಲೋಡ್ ಮಾಡಿಕೊಂಡು ನಿಗದಿತ ದಾಖಲೆಗಳು ಮತ್ತು ಡಿ.ಡಿ.ಯೊಂದಿಗೆ ನೋಡಲ್ ಕೇಂದ್ರವಾದ ಡಯಟ್. ದಾವಣಗೆರೆ ಇಲ್ಲಿಗೆ ನಿಗದಿತ ದಿನಾಂಕದೊಳಗೆ ಸಲ್ಲಿಸುವುದು. ಹೆಚ್ಚಿನ ಮಾಹಿತಿಯನ್ನು WWW.schooleducation.karnataka.gov.in ವೆಬ್ ಸೈಟ್ ತಿಳಿದುಕೊಳ್ಳಬಹುದು. ಹಾಗೂ ಕನ್ನಡ ಮಾಧ್ಯಮ - 9164489972, 988030377. 9844401092. 08192-231156. ಉರ್ದು ಮಾಧ್ಯಮ- 9164489972, 8867932439, 08192-231156 ಸಂಪರ್ಕಿಸಬಹುದೆಂದು ಡಯಟ್ ಪ್ರಾಂಶುಪಾಲರಾದ ಗೀತಾ ತಿಳಿಸಿದ್ದಾರೆ.

# ಪ್ರಜೆಗಳಿಗೆ ಉತ್ತಮ ನ್ಯಾಯ ಒದಗಿಸುವ ಮಹತ್ವದ ಜವಾಬ್ದಾರಿ ವಕೀಲರ ಮೇಲಿದೆ

### ನ್ಯಾಯಾಧೀಶರಿಗೆ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ



ದಾವಣಗೆರೆ, ಮೇ 14 - ಪ್ರಜಾಪ್ರಭುತ್ವದ ನೆಲೆಯಲ್ಲಿ ಭಾರತದ ಸಂವಿಧಾನದ ತಳಹದಿಯಲ್ಲಿ ನ್ಯಾಯಾಂಗವು ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದೆ. ಸಮಾಜದ ನೊಂದ ಕಟ್ಟಕಡೆಯ ಪ್ರಜೆಗಳಿಗೆ ಉತ್ತಮ ನ್ಯಾಯ ಒದಗಿಸುವ ಮಹತ್ವದ ಜವಾಬ್ದಾರಿ ನಮ್ಮ ಮೇಲಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್.ಹೆಗಡೆ ಅಭಿಪ್ರಾಯ ಪಟ್ಟರು.

ಜಿಲ್ಲಾ ವಕೀಲರ ಸಂಘ, ವತಿಯಿಂದ ವಕೀಲರ ಸಂಘದ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗಿದ್ದ ವರ್ಗಾವಣೆಗೊಂಡ ನ್ಯಾಯಾಧೀಶರಿಗೆ ಬೀಳ್ಕೊಡುಗೆ ಸಮಾರಂಭ ದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿ, ವರ್ಗಾವಣೆಗೊಂಡ ನ್ಯಾಯಾಧೀಶರು ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸಿ, ವಕೀಲರ ಮೆಚ್ಚುಗೆಗೆ ಪಾತ್ರರಾಗಿರುವುದು ಪ್ರಶಂಸನೀಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಹೆಚ್.ಅರುಣ್‌ಕುಮಾರ್ ಮಾತನಾಡಿ, ನ್ಯಾಯಾಧೀಶರು ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡು ಸಾಮಾಜಿಕ ನ್ಯಾಯದ ಅಡಿಯಲ್ಲಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಿದ್ದಾರೆ. ನ್ಯಾಯಾಂಗದ ಮೇಲೆ ಜನಸಾಮಾನ್ಯರಿಗೆ ವಿಶ್ವಾಸ, ನಂಬಿಕೆ ಬರುವಂತೆ ಮಾಡುವ ನಿಟ್ಟಿನಲ್ಲಿ ನ್ಯಾಯಾಧೀಶರು ಮತ್ತು ವಕೀಲರ ಪಾತ್ರ ಅತಿಮುಖ್ಯ ಎಂದರು.

ಈ ವೇಳೆ ವಕೀಲರಾದ ಕೆ.ಎಂ. ಮಲ್ಲಿಕಾರ್ಜುನಪ್ಪ, ರಾಘವೇಂದ್ರ ಶೆಟ್ಟಿ, ಬಳ್ಳಾರಿ ರೇವಣ್ಣ, ಎನ್.ಜಯದೇವನಾಯ್ಕ, ಎನ್.ಎಂ.ಆಂಜನೇಯ, ಟಿ.ಆರ್.ಗುರು ಬಸವರಾಜ್, ಡಿ.ಪಿ.ಬಸವರಾಜ್, ಆರ್. ಭಾಗ್ಯಲಕ್ಷ್ಮಿ ಅಭಿನಂದಿಸಿ, ಮಾತನಾಡಿದರು.

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಆರ್.ಎನ್. ಪ್ರವೀಣ್‌ಕುಮಾರ್ ಮುಖ್ಯ ಅತಿಥಿಯಾಗಿದ್ದರು. ಕಾರ್ಯಕ್ರಮದಲ್ಲಿ ವರ್ಗಾವಣೆಗೊಂಡ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜೆ.ವಿ. ವಿಜಯಾನಂದ್, ಜಿಲ್ಲಾ ಸತ್ರ ನ್ಯಾಯಾಧೀಶರು, ಎಸ್‌ಟಿಎಫ್‌ಸಿ ನ್ಯಾಯಾಧೀಶರಾದ ಎನ್.ಶ್ರೀಪಾದ್, ಜಿಲ್ಲಾ ನ್ಯಾಯಾಧೀಶರು, ಕೌಟುಂಬಿಕ ನ್ಯಾಯಾಧೀಶರಾದ ಬಿ.ದಶರಥ, 3ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಜೆಎಂಎಫ್‌ಸಿ ಆದ ಕೆ.ಅಫ್ತಾಬ್, ಜಿಲ್ಲಾ ನ್ಯಾಯಾಧೀಶರಾಗಿ ಮುಂಬಡ್ತಿ ಪಡೆದ ಪ್ರಧಾನ ಸಿವಿಲ್ ನ್ಯಾಯಾಧೀಶರೂ, ಸಿಜೆಎಂ ಆದ ಶಿವಪ್ಪ ಗಂಗಪ್ಪ ಸಲಗರೆ ಇವರಿಗೆ ಹೃದಯ ಸ್ಪರ್ಶಿಯಾಗಿ ಸನ್ಮಾನಿಸಲಾಯಿತು.

ಈ ವೇಳೆ ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ.ಬಸವರಾಜ್ ಗೋಪನಾಳು, ಕಾರ್ಯದರ್ಶಿ ಎಸ್.ಬಸವರಾಜ್, ಸಹ ಕಾರ್ಯದರ್ಶಿ ಎ.ಎಸ್.ಮಂಜುನಾಥ್, ಕಾರ್ಯಕಾರಿ ಸಮಿತಿ ಸದಸ್ಯರಾದ ಆರ್. ಭಾಗ್ಯಲಕ್ಷ್ಮಿ, ಎಂ.ಚೌಡಪ್ಪ, ಎಲ್. ನಾಗರಾಜ್, ಕೆ.ಎಂ.ನೀಲಕಂಠಯ್ಯ, ಜಿ.ಜೆ.ಸಂತೋಷ್‌ಕುಮಾರ್, ವಾಗೀಶ್ ಕಟಗಿಹಳ್ಳಿ ಮಠ ಇತರರು ಇದ್ದರು.

## ಗಾಂಧಿ ಭವನದಲ್ಲಿ ಚಿಂತನಾಗೋಷ್ಠಿ



ದಾವಣಗೆರೆ, ಮೇ 14 - ನಗರದ ಗಾಂಧಿ ಭವನದಲ್ಲಿ ಗಾಂಧಿ ಭವನ ಹಾಗು ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ ಪ್ರಥಮ ಚಿಂತನ ಗೋಷ್ಠಿ ಆರಂಭಿಸಲಾಯಿತು.

ಸಂತೇಬೆನ್ನೂರಿನ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ತಾಜುದ್ದೀನ್ ಬೇತೂರ್ ಮತ್ತು ತ್ಯಾವಣಿಗೆ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಮಹಾಂತೇಶ್ ನಿಟ್ಟೂರು ಅವರನ್ನು ಸಂಚಾಲಕರಾಗಿ ಸ್ವಯಂ ಪ್ರೇರಣೆಯಿಂದ ಕಾರ್ಯ ನಿರ್ವಹಣೆ ಮಾಡಲು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಉತ್ತರಾದಿ ಸಂಘದ ಉಷಾರಾಣಿ, ಕರ್ನಾಟಕ ಸಾಂಸ್ಕೃತಿಕ ಸಾಹಿತ್ಯ ಪರಿಷತ್ ನ ಅಧ್ಯಕ್ಷ ಎಸ್. ಅಜಯಕುಮಾರ್, ಗಾಂಧೀ ಗ್ರಾಮ ಸೇವಾಶ್ರಮದ ಸಾಧಕ ಕಡ್ಲೆಬಾಳ್ ಪ್ರಕಾಶ್, ಗ್ರಾಮ ಸ್ವರಾಜ್ಯ ಅಭಿಯಾನದ ಆವರಗೆರೆ ರುದ್ರಮುನಿ, ಗಾಂಧಿ ಭವನದ ಗ್ರಂಥಪಾಲಕ ಈಶ್ವರ್ ಭಾಗವಹಿಸಿದ್ದರು.

## ಜೈನ್ ವಿದ್ಯಾಲಯ, ಸಿ.ಬಿ.ಎಸ್.ಇ

ದಾವಣಗೆರೆ, ಮೇ 14 - ಫೆಬ್ರವರಿ – ಮಾರ್ಚ್ ತಿಂಗಳಲ್ಲಿ ನಡೆದ 10ನೇ ತರಗತಿ ಸಿ.ಬಿ.ಎಸ್.ಇ ಪರೀಕ್ಷೆಯಲ್ಲಿ ನಗರದ ಜೈನ್ ವಿದ್ಯಾಲಯ, ಸಿ.ಬಿ.ಎಸ್.ಇ ಶೇ. 100% ರಷ್ಟು ಫಲಿತಾಂಶ ಲಭಿಸಿದೆ.

ಶಾಲೆಯ ಮಕ್ಕಳು 4 ಡಿಸ್ಟಿಂಕ್ಷನ್, 23 ಅತ್ಯುನ್ನತ ಶ್ರೇಣಿ, 10 ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು, ಸುಜಿತ್‌ಕುಮಾರ ದೀಪ್‌ಚಂದ ಶಾ ಮತ್ತು ದೀಪಾಲಿ ಸುಜಿತ್‌ಕುಮಾರ ಶಾ ಇವರ ಪುತ್ರಿ ಅಂಜಲಿ ಸುಜಿತ್‌ಕುಮಾರ ಶಾ 91.2 % ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಆರ್.ಜೈನ್. ಸಂತೋಷ ಕುಮಾರ್ ಮತ್ತು ಎಸ್.ಜೈನ್. ಭಾವನ ಇವರ ಪುತ್ರ ಎಸ್.ಜೈನ್. ಜೈನಮ್ 88 % ಶಾಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಸಂಸ್ಥೆಯ ವ್ಯವಸ್ಥಾಪಕರು, ಶಿಕ್ಷಕರು ಬೋಧಕೇತರ ಸಿಬ್ಬಂದಿ ಮತ್ತು ಪೋಷಕರು ಮೆಚ್ಚುಗೆ ವ್ಯಕ್ತಪಡಿಸಿದರು.

# ಪ್ರಯೋಗದ ಲೋಪ ಸರಿಪಡಿಸಲು ಸೂಚನೆ

**(3ನೇ ಪುಟದಿಂದ)** ಅಧಿಸೂಚಿತ ಪ್ರದೇಶ ವಲ್ಲ ಎಂದು ಸ್ಪಷ್ಟಪಡಿಸಿ, ಜಿಲ್ಲೆಯಲ್ಲಿ ಶೇ 70 ಕ್ಕಿಂತ ಅಧಿಕ ಮಳೆಯ ಕೊರತೆಯಾಗಿದ್ದು ಶತಮಾನ ದಲ್ಲಿಯೇ ಅತ್ಯಂತ ಭೀಕರ ಬರಗಾಲವಾಗಿರುತ್ತದೆ. ಆಗಸ್ಟ್‌ನಲ್ಲಿ ಎಷ್ಟು ಮಳೆ ಬರಬೇಕಾಗಿತ್ತು, ಅದರಲ್ಲಿ ತೀವ್ರ ಕೊರತೆ ಉಂಟಾಗಿದ್ದರಿಂದ ಜಿಲ್ಲೆಯಾದ್ಯಂತ ಬೆಳೆಹಾನಿಯಾಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ವಿಮಾ ಕಂಪನಿಯ ಅಧಿಕಾರಿಗಳಿಗೆ ಸ್ಪಷ್ಟಪಡಿಸಿ, ರೈತರ ಹಿತದೃಷ್ಟಿಯಿಂದ ರೈತರ ಪರವಾಗಿ ಎಲ್ಲರೂ ಕೆಲಸ ಮಾಡಬೇಕೆಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರಿನ್ ಭಾನು ಎಸ್. ಬಳ್ಳಾರಿ, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ವಿಮಾ ಕಂಪನಿ ವಲಯಾಧಿಕಾರಿ ಕೃಷ್ಣರಾಜ, ಸಾಂಖ್ಯಿಕ ಅಧಿಕಾರಿ ನೀಲಾ ಉಪಸ್ಥಿತರಿದ್ದರು.

## 11597 ರೈತರ ಖಾತೆಗಳು ವ್ಯತ್ಯಾಸ

**(3ನೇ ಪುಟದಿಂದ)** ಕರೆಗಳನ್ನು ಸ್ವೀಕರಿಸಲಾಗಿದೆ. ಬ್ಯಾಂಕ್‌ಗಳಲ್ಲಿ ಪ್ರತ್ಯೇಕವಾಗಿ ಸಹಾಯ ಮೇಜು ಸ್ಥಾಪನೆ ಮಾಡುವ ಮೂಲಕ ಆಧಾರ್ ಸೀಡಿಂಗ್ ಮಾಡುವುದು ಮತ್ತು ಆಧಾರ್‌ನಂತೆ ಬ್ಯಾಂಕ್ ಖಾತೆಯನ್ನು ತಿದ್ದುಪಡಿ ಮಾಡುವ ಮೂಲಕ ಆದಷ್ಟು ಬೇಗ ರೈತರ ಖಾತೆಗಳಿಗೆ ಪರಿಹಾರ ಜಮಾ ಮಾಡಲು ದಾಖಲೆಗಳನ್ನು ಸರಿಪಡಿಸುವ ಕೆಲಸವನ್ನು ಎಲ್ಲಾ ಬ್ಯಾಂಕ್‌ಗಳಿಂದಾಗಬೇಕಾಗಿದೆ ಎಂದರು.

**ಸಾಲಕ್ಕೆ ಪರಿಹಾರ ಜಮಾ ಮಾಡುವಂತಿಲ್ಲ:** ರೈತರು ಬೆಳೆನಷ್ಟ ಅನುಭವಿಸಿದ್ದು, ಇವರಿಗೆ ಇನ್‌ಪುಟ್ ಸಬ್ಸಿಡಿ, ಬೆಳೆ ವಿಮಾ ಪರಿಹಾರ ಹಾಗೂ ಉದ್ಯೋಗ ಖಾತರಿಯಡಿ ಕೂಲಿ ಹಣವನ್ನು ಖಾತೆಗೆ ಜಮಾ ಮಾಡಲಾಗಿದ್ದು, ಇದನ್ನು ರೈತರು ಪಡೆದ ಸಾಲಕ್ಕೆ ತೀರುವಳಿ ಮಾಡಬಾರದು ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಭಾನು ಎಸ್.ಬಳ್ಳಾರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್, ಲೀಡ್ ಮ್ಯಾನೇಜರ್ ಪ್ರಕಾಶ್ ಹಾಗೂ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ವಿದ್ಯಾರ್ಥಿಗಳು ಜಾಗತಿಕ ನಾಗರಿಕರು

**(3ನೇ ಪುಟದಿಂದ)** ಬ್ಯಾಂಕ್ ವಿಶ್ವವಿದ್ಯಾಲಯದ ಉಪನ್ಯಾಸಕ ಲಾರೆನ್ಸ್ ಫಿಶರ್ ಮಾತನಾಡಿ, ನಾನು ಕಲಿಕೆಯ ಆರಂಭಿಕ ದಿನಗಳಲ್ಲಿ ನಿರ್ಲಕ್ಷ್ಯ ತೋರಿದ್ದು, ನಂತರದಲ್ಲಿ ಉದ್ಯೋಗದ ಮೇಲೆ ಪರಿಣಾಮ ಬೀರಿತ್ತು. ವಿದ್ಯಾರ್ಥಿಗಳು ಅಂತಹ ತಪ್ಪು ಮಾಡಬಾರದು ಎಂದು ಕಿವಿಮಾತು ಹೇಳಿದರು.

ಜಿ.ಎಂ.ಐ.ಟಿ. ಪ್ರಾಂಶುಪಾಲ ಸಂಜಯ್ ಪಾಂಡೆ ಮಾತನಾಡಿ, ಇಂಜಿನಿಯರಿಂಗ್ ಪದವೀಧರರೂ ಸಹ ನಿರ್ವಹಣಾ ಶಾಸ್ತ್ರದ ಪರಿಣಿತರಾದಾಗ ಹೆಚ್ಚಿನ ಸಾಧನೆ ಸಾಧ್ಯ ಎಂದು ಹೇಳಿದರು.

ವೇದಿಕೆಯ ಮೇಲೆ ಎಂ.ಬಿ.ಎ. ವಿಭಾಗದ ನಿರ್ದೇಶಕ ಬಕ್ಕಪ್ಪ, ಜಿ.ಎಂ. ವಿಶ್ವವಿದ್ಯಾಲಯದ ವೈಸ್ ಚಾನ್ಸಲರ್ ಪ್ರೊ ಹೆಚ್.ಡಿ. ಮಹೇಶಪ್ಪ, ರಿಜಿಸ್ಟ್ರಾರ್ ಬಿ.ಎಸ್. ಸುನೀಲ್ ಕುಮಾರ್, ಎಂಬಿಎ ವಿಭಾಗದ ಮುಖ್ಯಸ್ಥ ಪಿ.ಎಸ್. ಬಸವರಾಜ್ ಮತ್ತಿತರರು ಉಪಸ್ಥಿತರಿದ್ದರು.

ಪಲ್ಲವಿ ಮತ್ತು ರಕ್ಷಿತ ಪ್ರಾರ್ಥಿಸಿದರು. ಬಸವರಾಜ ಸ್ವಾಮಿ ಸ್ವಾಗತಿಸಿದರೆ, ಅಮಿತ್ ಕುಮಾರ್ ನಿರೂಪಿಸಿದರು. ಎಸ್. ಶಿವಕುಮಾರ ವಂದಿಸಿದರು.

## ಅಡಿಕೆ ಮರ ಸುಟ್ಟು ಹಾಕಿದ ರೈತ

**(3ನೇ ಪುಟದಿಂದ)** ಈ ಸಂದರ್ಭದಲ್ಲಿ ಅಣಬೇರು ಗ್ರಾಮ ಪಂಚಾಯತಿ ಅಧ್ಯಕ್ಷ ಬುಡೇನ್ ಸಾಬ್, ಸದಸ್ಯ ಮಹಾರುದ್ರಪ್ಪ, ಜಾಫರ್ ಶರೀಫ್, ಸೇರಿದಂತೆ ರೈತರು, ಗ್ರಾಮಸ್ಥರು ಹಾಜರಿದ್ದರು.

### ರೈತನಿಗೆ ಧೈರ್ಯ ತುಂಬಿದ ಶಾಸಕ

ಮಳೆ ಕೊರತೆ, ಬೋರ್ ವೆಲ್ ನಲ್ಲಿ ನೀರು ಕುಸಿತದಿಂದ ಅಡಿಕೆ ಮರಗಳು ಒಣಗುವುದನ್ನು ಕಂಡು ಬೇಸತ್ತ ಹೊನ್ನಾಯಕನಹಳ್ಳಿ ಗ್ರಾಮದ ರೈತ ಶಾಸ್ತ್ರಿಹಳ್ಳಿ ಬಸವರಾಜಪ್ಪ ಎಂಬುವರು ತಮ್ಮ 2 ಎಕರೆಯಲ್ಲಿ ಬೆಳೆದಿದ್ದ ಅಡಿಕೆ ಮರಗಳನ್ನು ಕಡಿದು ಸುಟ್ಟು ಹಾಕಿದ್ದ ವಿಷಯ ತಿಳಿದ ಶಾಸಕ ಕೆ.ಎಸ್.ಬಸವಂತಪ್ಪ ಭೇಟಿ ನೀಡಿ ರೈತ ಬಸವರಾಜಪ್ಪ ಹಾಗೂ ಕುಟುಂಬಕ್ಕೆ ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ಗ್ರಾಮದ ಎಚ್.ಡಿ. ಕಿರಣಕುಮಾರ್, ದೇವೇಂದ್ರಪ್ಪ, ಸಿದ್ದೇಶ್, ಹನುಮಂತಪ್ಪ, ಸಿದ್ದಪ್ಪ ಇದ್ದರು.

## ನಗರದಲ್ಲಿ ಇಂದಿನಿಂದ 'ನಿನಾದ- 9' ಗೀತ ಗಾಯನ ತರಬೇತಿ ಶಿಬಿರ



ಸುಶ್ರಾವ್ಯ ಸಂಗೀತ ವಿದ್ಯಾಲಯದ ವತಿಯಿಂದ ಇಂದಿನಿಂದ 5 ದಿನಗಳ ಕಾಲ 'ನಿನಾದ-9' ಗೀತ ಗಾಯನ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ಈ ಶಿಬಿರದಲ್ಲಿ ನಾಡಿನ ಹೆಮ್ಮೆಯ ಕವಿ ಬಿ.ಆರ್. ಲಕ್ಷ್ಮಣರಾವ್ ಅವರ ಆಯ್ದ 10 ಗೀತೆಗಳ ಗಾಯನ ತರಬೇತಿ ನೀಡಲಾಗುವುದು. ಕನ್ನಡ ನಾಡು-ನುಡಿ, ಪ್ರಕೃತಿ ಸಂರಕ್ಷಣೆ, ಮಾತೃವಾತ್ಸಲ್ಯ, ಭಾವೈಕ್ಯತೆ, ಸಂಸ್ಕಾರ ಹಾಗೂ ನೀತಿಗಳನ್ನೊಳಗೊಂಡ ವಿವಿಧ ಗೀತೆಗಳ ಕಲಿಕೆಯು ಗಾಯನದೊಂದಿಗೆ ಉತ್ತಮ ವ್ಯಕ್ತಿತ್ವಕ್ಕೆ ಪ್ರೇರಣೆಯಾಗಬಲ್ಲವು.

ಶಿಬಿರದಲ್ಲಿ ಗಾಯನದ ಜೊತೆಗೆ ಕವಿಯ ಜೀವನ, ಸಾಧನೆ ,ಸಾಹಿತ್ಯ ರಚನೆ ಕುರಿತ ಮಾಹಿತಿಯನ್ನೂ ತಿಳಿಸಿ ಕೊಡಲಾಗುತ್ತದೆ. ರಸಪ್ರಶ್ನೆ, ಗಾದೆ, ಒಗಟು ಮುಂತಾದ ಚಟುವಟಿಕೆಗಳೂ, ಸವಿಯಲು ರುಚಿಯಾದ ತಿನಿಸುಗಳೂ ಇರಲಿವೆ. ಶಿಬಿರಾರ್ಥಿಗಳಿಗೆ ಹಾಡಿನ ಪುಸ್ತಕ, ಆಯ್ದ ಗೀತೆಗಳ ಕರೋಕೆ ಹಾಗೂ ಪ್ರಶಸ್ತಿ ಪತ್ರ ನೀಡಲಾಗುವುದು. 6 ವರ್ಷ ಮೇಲ್ಪಟ್ಟ ಎಲ್ಲಾ ವಯೋಮಾನದ ಆಸಕ್ತರು(ಸ್ತ್ರೀ/ಪುರುಷ) ಭಾಗವಹಿಸಬಹುದು

ವಿದ್ಯಾಲಯದ ಸಂಸ್ಥಾಪಕರಾದ ಶ್ರೀಮತಿ ಯಶಾ ದಿನೇಶ್ ಅವರ ಪರಿಕಲ್ಪನೆಯಲ್ಲಿ ಈ ಶಿಬಿರ ಏರ್ಪಾಡಾಗಿದೆ. ವಿವರಕ್ಕೆ ಶ್ರೀಮತಿ ಯಶಾ ದಿನೇಶ್ (9449808886) ಅವರನ್ನು ಸಂಪರ್ಕಿಸಬಹುದು..

## ಅನ್‌ಮೋಲ್ ಶಾಲೆಗೆ ಶೇ.100 ಫಲಿತಾಂಶ





ದಾವಣಗೆರೆ, ಮೇ 14- ಅನ್‌ಮೋಲ್ ಪಬ್ಲಿಕ್ ಶಾಲೆಗೆ ಸಿ.ಬಿ.ಎಸ್.ಇ. 10ನೇ ತರಗತಿ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ಲಭಿಸಿದೆ. 15 ವಿದ್ಯಾರ್ಥಿಗಳು ಉನ್ನತ ಶ್ರೇಣಿ, 69 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ತನೀಷ್ ಎಂ., ರಿಷಿಕಾ ವಿನ್ಯಾ ಎಸ್ ಹಾಗೂ ಯಶ್‌ವಂತ್ ಹೆಚ್.ಜಿ ಇವರು ಶಾಲೆಗೆ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಗಳಿಸಿದ್ದಾರೆ.

## ಹಳೇ ಮತ್ತು ಹೊಸ ಬಸ್ ನಿಲ್ದಾಣಗಳು ಮರು ನಿರ್ಮಾಣಗೊಂಡರೂ ತಾತ್ಕಾಲಿಕ ನಿಲ್ದಾಣದಿಂದ ಕಿರಿಕಿರಿ

ಓದುಗರ ಪತ್ರ



**ಮಾನ್ಯರೇ,**

ನಗರದ ಹಳೇ ನ್ಯಾಯಾಲಯದ ಎದುರು ಇರುವ ರಸ್ತೆಯು ಒಮ್ಮುಖ ರಸ್ತೆಯಾಗಿದ್ದರೂ ಪ್ರತಿ ದಿನ ಸರ್ಕಾರಿ ಮತ್ತು ಖಾಸಗೀ ಬಸ್ಸುಗಳು ಸಾಲಾಗಿ, ಮೇಲಿಂದ ಮೇಲೆ ಬರುವುದರಿಂದ ಸಾರ್ವಜನಿಕರಿಗೆ ಸರಾಗವಾಗಿ ಚಲಿಸಲು ತುಂಬಾ ಕಠಿಣವಾಗಿರುತ್ತದೆ.

ಸರ್ಕಾರಿ ಬಸ್ ನಿಲ್ದಾಣವು ಉದ್ಘಾಟನೆ ಆಗಿ ತಿಂಗಳು ಕಳೆದಿದ್ದರೂ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡದೇ ತಾತ್ಕಾಲಿಕ ಸರ್ಕಾರಿ ಬಸ್ ನಿಲ್ದಾಣ ಉಳಿಸಿಕೊಂಡಿರುವುದು ಜೊತೆಗೆ ಖಾಸಗೀ ಬಸ್ ನಿಲ್ದಾಣ ಉದ್ಘಾಟನೆಗೊಂಡು ವರ್ಷ ಕಳೆದರೂ ಖಾಸಗೀ ಬಸ್ ನಿಲ್ದಾಣವನ್ನು ಸ್ಥಳಾಂತರ ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ಉಪದ್ರವ ಸ್ಥಿತಿಯು ಎದುರಾಗಿದೆ.

ವಕೀಲರು ತಮ್ಮ ತಮ್ಮ ಕಕ್ಷಿದಾರರ ದಾವೆಗಳನ್ನು ನಡೆಸಲು ಹಳೇ ನ್ಯಾಯಾಲಯಗಳ ಸಂಕೀರ್ಣದಿಂದ ಹೊಸ ನ್ಯಾಯಾಲಯಗಳ ಸಂಕೀರ್ಣದ ಕಡೆಗೆ ಸರಿಯಾದ ಸಮಯಕ್ಕೆ ಹೋಗಲು ಆಗದೇ ಟ್ರಾಫಿಕ್ ಜಾಮ್ ಕಾರಣದಿಂದಾಗಿ ತೀವ್ರ ಸಮಸ್ಯೆಯು ಇರುತ್ತದೆ. ಬಸ್ಸುಗಳು ತನ್ನ ನಿಲ್ದಾಣದಿಂದ ಹೊರ ಬಂದು ರಸ್ತೆಯಲ್ಲಿಯೂ ಪ್ರಯಾಣಿಕರನ್ನು ಹತ್ತಿಸಿಕೊಳ್ಳುವ ಸನ್ನಿವೇಶಗಳು ಸಾಮಾನ್ಯವಾಗಿವೆ. ಇದರಿಂದಾಗಿ ಅನಾವಶ್ಯಕವಾಗಿ ಟ್ರಾಫಿಕ್ ಜಾಮ್ ಉಲ್ಬಣಿಸುತ್ತದೆ. ಆದ್ದರಿಂದ ದಯವಿಟ್ಟು ಈಗಾಗಲೇ ಮರು ನಿರ್ಮಾಣಗೊಂಡು ಕಾದು ಕುಳಿತಿರುವ ಖಾಸಗೀ ಮತ್ತು ಸರ್ಕಾರಿ ಬಸ್ ನಿಲ್ದಾಣಗಳನ್ನು ಶೀಘ್ರವಾಗಿ ಪೂರ್ಣಪ್ರಮಾಣದಲ್ಲಿ ತೆರೆದು, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿ.

**- ವಾದಿರಾಜ ಭಟ್ ವೈ.**, ವಕೀಲರು, ದಾವಣಗೆರೆ.

## ನಗರದಲ್ಲಿ ಬೀದಿ ನಾಯಿ ಸ್ಥಳಾಂತರಿಸಿ

**ಮಾನ್ಯರೇ,**

ಎಂ. ಸಿ. ಸಿ. 'ಬಿ' ಬ್ಲಾಕ್ ನ 11ನೇ ಮುಖ್ಯ ರಸ್ತೆ ಹಾಗೂ ಸುತ್ತ ಮುತ್ತ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಸಾಕು ಪ್ರಾಣಿಗಳನ್ನು ಕಚ್ಚಿ ಸಾಯಿಸಿವೆ. ಹಂದಿ ಮರಿಗಳನ್ನು ಬೇಟೆಯಾಡಿ ಕೊಂದು ಅರೆಬರೆ ಬಿಟ್ಟು ಹೋಗುತ್ತವೆ. ಅಲ್ಲದೆ ಮಕ್ಕಳ ಹಾಗೂ ದ್ವಿಚಕ್ರ ವಾಹನ ಚಲಾಯಿಸುವವರನ್ನು ಇವು ಬೆನ್ನಟ್ಟಿ ಹೋಗುವುದರಿಂದ ಅನಾಹುತಗಳಾಗಿವೆ. ನಾನು ಪ್ರಾಣಿ ದಯೆ ಉಳ್ಳವನಾದ್ದರಿಂದ ಈ ಬೀದಿ ನಾಯಿಗಳನ್ನು ಕೂಡಲೇ ಸೂಕ್ತ ಪ್ರದೇಶಕ್ಕೆ ಸ್ಥಳಾಂತರಿಸಲು ಕೋರುತ್ತೇನೆ.

**- ರಾಜಗೋಪಾಲ ವಾಂಜ್ರೆ. (ನಿವಾಸಿ)**

## ಶಾಸ್ತ್ರಿಹಳ್ಳಿ : ಇಂದು ಪುಣ್ಯಾರಾಧನೆ ಮಹೋತ್ಸವ

ದಾವಣಗೆರೆ : ಶ್ರೀ ಶಿವ ದೇವಾನಂದಗಿರಿ ಸ್ವಾಮಿಗಳ 24ನೇ ಪುಣ್ಯಾರಾಧನೆ ಮಹೋತ್ಸವವನ್ನು ಸಮೀಪದ ಶಾಸ್ತ್ರಿಹಳ್ಳಿ ಅಭಯಾಶ್ರಮದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 7.05 ರಿಂದ ವೇದ ಪಠಣ ಮತ್ತು ಗೀತಾ ಪಾರಾಯಣ, ಬೆಳಿಗ್ಗೆ 7.30ಕ್ಕೆ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, 10.15ಕ್ಕೆ ಶ್ರೀಗಳ ಪುಣ್ಯಸ್ಮರಣೆಯ ಸಭೆ ಪ್ರಾರಂಭವಾಗುವುದು.

ಅಭಯಾಶ್ರಮ ಸೇವಾ ಟ್ರಸ್ಟ್‌ನ ಅಧ್ಯಕ್ಷ ಆರ್. ಆರ್. ರಮೇಶ್‌ಬಾಬು ಅಧ್ಯಕ್ಷತೆ ವಹಿಸಲಿದ್ದಾರೆ.

ಹೆಚ್.ಬಿ. ಮಂಜುನಾಥ್ ರಾಮನಾಮ ಮಹಿಮೆ ಹಾಗೂ ರಾಮಕೃಷ್ಣ ಮಿಷನ್‌ನ ಕಾರ್ಯದರ್ಶಿಗಳು ಶ್ರೀ ಸ್ವಾಮಿ ತ್ಯಾಗೀಶ್ವರಾನಂದ ಜೀ ಮಹಾರಾಜ್ ಅವರಿಂದ ಆಶೀರ್ವಚನ ನಡೆಯಲಿದೆ ಎಂದು ಅಭಯಾಶ್ರಮ ಸೇವಾ ಟ್ರಸ್ಟ್‌ನವರು ತಿಳಿಸಿದ್ದಾರೆ.

# ಕಾರಾಗೃಹದಿಂದ ರೇವಣ್ಣ ಬಿಡುಗಡೆ

## ಕಾರ್ಯಕರ್ತರು, ಅಭಿಮಾನಿಗಳಿಂದ ಸ್ವಾಗತ



ಬೆಂಗಳೂರು, ಮೇ 14 - ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣದ ಸಂತ್ರಸ್ತೆಯ ಅಪಹರಣ ಆರೋಪದ ಮೇಲೆ ಜೈಲು ಪಾಲಾಗಿದ್ದ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಇಂದು ಪರಪ್ಪನ ಅಗ್ರಹಾರ ಕಾರಾ ಗೃಹದಿಂದ ಬಿಡುಗಡೆಯಾಗಿದ್ದಾರೆ.

ಅಪಹರಣದ ಆರೋಪದ ಮೇಲೆ ಎಸ್‌ಐಟಿ ಅಧಿಕಾರಿಗಳು ರೇವಣ್ಣ ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರು.

ಜನಪ್ರತಿನಿಧಿಗಳ ನ್ಯಾಯಾಲಯ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ-ಪ್ರತಿವಾದ ಆಲಿಸಿ, ಷರತ್ತು ಬದ್ಧ ಜಾಮೀನು ನೀಡಿತ್ತು.

ನ್ಯಾಯಾಲಯದ ತೀರ್ಪು ಸಂಜೆ ನಂತರ ಪ್ರಕಟಗೊಂಡಿದ್ದರಿಂದ ನಿಯಮಾವಳಿ ರೀತಿ ರಾತ್ರಿ ಅವರನ್ನು ಬಿಡುಗಡೆ ಮಾಡಲು ಸಾಧ್ಯವಾಗಿರಲಿಲ್ಲ.

ರೇವಣ್ಣ ಪರ ವಕೀಲರು ಇಂದು ಜೈಲು ಅಧಿಕಾರಿಗಳಿಗೆ ನ್ಯಾಯಾಲಯದ ಮಾಹಿತಿ ಮತ್ತು ದಾಖಲೆಗಳನ್ನು ನೀಡಿದ ನಂತರ ಮಧ್ಯಾಹ್ನದ ನಂತರ ಬಿಡುಗಡೆ ಮಾಡಲಾಯಿತು.

ಬಿಡುಗಡೆಗೊಂಡ ರೇವಣ್ಣ ಅವರನ್ನು ಜೆಡಿಎಸ್ ಕಾರ್ಯಕರ್ತರು ಮತ್ತು ಅಭಿಮಾನಿ ಗಳು ಜೈಲಿನ ಹೊರಗೆ ಭಾರೀ ಸಂಭ್ರಮ ದಿಂದ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಕಾರ್ಯ ಕರ್ತರನ್ನು ನಿಯಂತ್ರಿ ಸಲು ಪೊಲೀಸರು ಲಘು ಲಾಠಿ ಪ್ರಹಾರ ಮಾಡಬೇಕಾಯಿತು.

ಜೈಲಿನಿಂದ ಬಿಡುಗಡೆಗೊಂಡ ರೇವಣ್ಣ ಯಾರ ಬಳಿಯೂ ಮಾತನಾಡದೆ, ನೇರವಾಗಿ ತಮ್ಮ ಸಹೋದರಿ ಮನೆಯಲ್ಲಿ ವಾಸವಿರುವ ತಮ್ಮ ತಂದೆ ದೇವೇಗೌಡ ಹಾಗೂ ತಾಯಿ ಚನ್ನಮ್ಮ ಅವರನ್ನು ಭೇಟಿ ಮಾಡಲು ತೆರಳಿದರು.

ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಇಡೀ ಕುಟುಂಬ ರೇವಣ್ಣ ಅವರನ್ನು ಬರ ಮಾಡಿಕೊಂಡಿದ್ದಲ್ಲದೆ, ಇಡೀ ಕುಟುಂಬ ದವರು ಪರಸ್ಪರ ಸಮಾಲೋಚನೆ ನಡೆಸಿದರು. ಕಳೆದ ಮೇ 4ರಂದು ದೇವೇಗೌಡರ ನಿವಾಸದಲ್ಲಿಯೇ ಎಸ್‌ಐಟಿ ಅಧಿಕಾರಿಗಳಿಂದ ರೇವಣ್ಣ ಬಂಧನಕ್ಕೊಳಗಾಗಿದ್ದರು.


**ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜ್, ದಾವಣಗೆರೆ.**

**ಪ್ರವೇಶ ಪ್ರಕಟಣೆ**

* ನಮ್ಮಲ್ಲಿ ಲಭ್ಯವಿರುವ ಕೋರ್ಸ್‌ಗಳು : DMLT-ಲ್ಯಾಬೋರೇಟರ್ ಟೆಕ್ನಾಲಜಿ
* DHI-ಹೆಲ್ತ್ ಇನ್ಸ್‌ಪೆಕ್ಟರ್ * DOT - ಆಪ್ತಾಲ್ಮೆರ್ ಟೆಕ್ನಾಲಜಿ
* DOT & AT ಆಪರೇಷನ್ ಥಿಯೇಟರ್ ಮತ್ತು ಅನಸ್ತೇಯಾ ಟೆಕ್ನಾಲಜಿ.

**ಬೇಕಾಗಿದ್ದಾರೆ**

* ಆಫೀಸ್ ಕೆಲಸಕ್ಕಾಗಿ- ಯಾವುದೇ ಪದವಿ, ಕಂಪ್ಯೂಟರ್ ಜ್ಞಾನವಿರಬೇಕು.
* ಉಪನ್ಯಾಸಕರು - ಎಂ.ಎಸ್ಸಿ, ನರ್ಸಿಂಗ್, ಬಯೋ ಕೆಮಿಸ್ಟ್ರಿ, ಮೈಕ್ರೋ ಬಯೋಲಜಿ, ಸಿಬಿಝಡ್, ಬಯೋಲಜಿ, ಕೆಮಿಸ್ಟ್ರಿ ಇತರೆ. * ಕಂಪ್ಯೂಟರ್ ಜ್ಞಾನ ಹೊಂದಿರಬೇಕು.

ಹೆಚ್ಚಿನ ಮಾಹಿತಿಗಾಗಿ 70195 86789, 86180 50497

**ಎಂ.ಎನ್.ವಿ ಅಪರೇಲ್ಸ್**

ಫ್ಲಾಟ್ ನಂ. 74 & 75 ಕರೂರು ಇಂಡಸ್ಟ್ರೀಯಲ್ ಏರಿಯಾ, ಡಿ.ಸಿ. ಆಫೀಸ್ ಹಿಂಭಾಗ, ದಾವಣಗೆರೆ - 577004

**ಸಿದ್ಧ ಉಡುಪುಗಳ ತಯಾರಿಕಾ ಘಟಕ**

**ಮಹಿಳೆಯರಿಗಾಗಿ ಸುವರ್ಣ ಅವಕಾಶ**

**ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ**

ನಮಗೆ ಅನುಭವವುಳ್ಳ ಹಾಗೂ ಆಸಕ್ತಿಯುಳ್ಳ ಕೆಳಗಿನ ಹುದ್ದೆಗಳಿಗೆ ಕೆಲಸ ಖಾಲಿ ಇರುತ್ತದೆ.

**ಹುದ್ದೆಗಳು :**
❖ ಟೈಲರ್ಸ್
❖ ಟ್ರೈನಿಂಗ್ ಟೈಲರ್ಸ್
❖ ಚೆಕ್ಕರ್ಸ್ ❖ ಹೆಲ್ಪರ್ಸ್
❖ ಐರನರ್ಸ್ ❖ ಸೂಪರ್ ವೈಸರ್ಸ್
❖ ಇನ್‌ಚಾರ್ಜರ್ಸ್
❖ ಮೆಕ್ಯಾನಿಕ್ (ಪುರುಷರು)
❖ ಎಲೆಕ್ಟ್ರೀಷಿಯನ್ (ಪುರುಷರು)
ಒಟ್ಟಾಗಿ 1000 ಹುದ್ದೆಗಳಿಗೆ ಕೆಲಸ ಖಾಲಿ ಇದೆ.

**ಸೌಲಭ್ಯಗಳು :**
❖ ಅತ್ಯಾಕರ್ಷಕ ಸಂಬಳ
❖ ವೈದ್ಯಕೀಯ ಸೌಲಭ್ಯ
❖ ಹಾಜರಾತಿ ಬೋನಸ್
❖ ಉಚಿತ ಊಟದ ಸೌಲಭ್ಯ
❖ ಶಿಶುವಿಹಾರ
❖ ಉತ್ತಮ ಕೆಲಸದ ವಾತಾವರಣ
❖ ಪಿ.ಎಫ್. ಮತ್ತು ಇ.ಎಸ್.ಐ. ಸೌಲಭ್ಯವಿರುತ್ತದೆ.
❖ ಒಳ್ಳೆಯ ಸೆಕ್ಯೂರಿಟಿ ವ್ಯವಸ್ಥೆ.

ಮೊ : 72048 06575

# ಪುಟ್ಟರಾಜರ ಸಂಗೀತ ಉಳಿಸಿ, ಬೆಳೆಸಬೇಕಿದೆ

## ಪುಟ್ಟರಾಜ ಗವಾಯಿಗಳ ಅಭಿಮಾನಿ ಭಕ್ತರ ಸಮಾವೇಶದಲ್ಲಿ ಕಿರುವಾಡಿ ಗಿರಿಜಮ್ಮ



ದಾವಣಗೆರೆ, ಮೇ 14- ಬಸವಾದಿ ಶರಣರು ರಚಿಸಿದ ವಚನ ಸಾಹಿತ್ಯ ಮತ್ತು ಪುಟ್ಟರಾಜ ಗವಾಯಿಗಳು ಸಂಗೀತದ ಮೂಲಕ ಕೊಟ್ಟ ಜ್ಞಾನವನ್ನು ಉಳಿಸಿ, ಬೆಳೆಸಬೇಕಾದ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಬಾಪೂಜಿ ವಿದ್ಯಾಸಂಸ್ಥೆಯ ಸದಸ್ಯರಾದ ಶ್ರೀಮತಿ ಕಿರುವಾಡಿ ಗಿರಿಜಮ್ಮ ಹೇಳಿದರು.

ನಗರದ ಕುವೆಂಪು ಕನ್ನಡ ಭವನದಲ್ಲಿ ಭಾನುವಾರ ಪಂ. ಪುಟ್ಟರಾಜ ಸೇವಾ ಸಮಿತಿಯಿಂದ ನಡೆದ ಪುಟ್ಟರಾಜ ಗವಾಯಿಗಳ ಅಭಿಮಾನಿ ಭಕ್ತರ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಪಂಡಿತ ಪುಟ್ಟರಾಜ ಗವಾಯಿ ಅವರ ಸಂಗೀತದಲ್ಲಿ ಅಪಾರ ಜ್ಞಾನ ಅಡಗಿದೆ. ಅವರ ಸಂಗೀತ ಮನಸ್ಸಿಗೆ ಮುದ ನೀಡುವುದರ ಜತೆಗೆ ಮನಸ್ಸನ್ನು ಅರಳಿಸುತ್ತದೆ ಎಂದು ಹೇಳಿದರು.

ನಾನು ಕಿರುವಾಡಿ ಮನೆತನದ ಸೊಸೆಯಾದ ಕಾರಣ ಪುಟ್ಟರಾಜ ಗವಾಯಿ ಅವರನ್ನು ಹತ್ತಿರದಿಂದ ನೋಡುವ ಭಾಗ್ಯ ದೊರೆತಿತ್ತು. ಅವರು ನಮ್ಮ ಮನೆಗೆ ಪೂಜೆಗೆ ಬರುತ್ತಿದ್ದಾಗ, ಕಣ್ಣು ಇಲ್ಲದಿದ್ದರೂ ಗವಾಯಿಗಳು ಕೈಗೊಳ್ಳುತ್ತಿದ್ದ ಪೂಜೆ, ಪುನಸ್ಕಾರವು ದೈವಾಂಶಸಂಭೂತರೇ ಮಾಡುತ್ತಿರುವಂತೆ ಭಾಸವಾಗುತ್ತಿತ್ತು ಎಂದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಸಮಿತಿಯ ಜಿಲ್ಲಾಧ್ಯಕ್ಷ ಪಿ.ಬಿ ವಿನಾಯಕ ಮಾತನಾಡಿ, ಸಾರ್ವಜನಿಕರು ನಮಗೆ ಆರ್ಥಿಕವಾಗಿಲ್ಲದಿದ್ದರೂ ಮಾನಸಿಕವಾಗಿ ಬೆಂಬಲಿಸಿದರೆ, ಪುಟ್ಟರಾಜ ಗವಾಯಿಗಳವರ ಕುರಿತು ಮತ್ತಷ್ಟು ಕಾರ್ಯಕ್ರಮ ರೂಪಿಸಲು ಸಹಕಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಭಾರೀ ಬಿಸಿಲಿನಲ್ಲೂ ರಾಜ್ಯದ ವಿವಿಧ ಭಾಗಗಳಿಂದ ಈ ಸಮಾವೇಶದಲ್ಲಿ ಭಕ್ತರು ಪಾಲ್ಗೊಂಡಿರುವ ಬಗ್ಗೆ ಶ್ಲಾಘಿಸಿದ ವಿನಾಯಕ, ಇದು ಪುಟ್ಟರಾಜ ಗವಾಯಿಗಳವರ ಮೇಲಿನ ಭಕ್ತಿಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಡಾ.ಪಂ.ಪುಟ್ಟರಾಜ ಸೇವಾ ಸಮಿತಿಯ ಸಂಸ್ಥಾಪಕ ಚನ್ನವೀರ ಸ್ವಾಮಿ ಹಿರೇಮಠ ಪ್ರಾಸ್ತಾವಿಕ ಮಾತನಾಡಿ, ಪುಟ್ಟರಾಜ ಗವಾಯಿಗಳ 'ಸಾವಿರದ ಸಾಹಿತ್ಯ'ವನ್ನು ಅಭಿಯಾನದ ಮೂಲಕ ರಾಜ್ಯದ ಮನೆ-ಮನೆಗೆ ತಲುಪಿಸುತ್ತಾ ಗವಾಯಿಗಳ ಸಾಧನೆಯನ್ನು ಪಸರಿಸುವ ಕಾರ್ಯವನ್ನು ಸಮಿತಿ ಮಾಡುತ್ತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಿತಿಯ ಗೌರವಾಧ್ಯಕ್ಷ ಅಣಬೇರು ಮಂಜಣ್ಣ, ಕಸಾಪ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶಪ್ಪ, ಶಿವಬಸಯ್ಯ ಚರಂತಿಮಠ, ಪಿ.ಎಂ ಕೊಟ್ರಯ್ಯ ಇತರರು ಇದ್ದರು.

# ಭಗೀರಥ ಮಹರ್ಷಿ ಸಾಧನೆ ಅಸಾಮಾನ್ಯ

## ಭಗೀರಥ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ವೆಂಕಟೇಶ್



ದಾವಣಗೆರೆ, ಮೇ 14 - ಭಗೀರಥ ಮಹರ್ಷಿ ತನ್ನ ಘೋರ ತಪಸ್ಸಿನ ಮೂಲಕ ಕಠಿಣ ಕಾರ್ಯ ಪೂರೈಸಿ, ಪವಿತ್ರ ಗಂಗೆಯನ್ನು ಭೂಮಿಗೆ ತಂದ ಚೈತನ್ಯದ ಚಿಲುಮೆ, ಛಲಗಾರ ಎಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮತ್ತು ಉಪ್ಪಾರ ಸಮಾಜ, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಭಗೀರಥ ಜಯಂತಿಯಲ್ಲಿ ಭಾಗವಹಿಸಿ, ಭಗೀರಥ ಮಹರ್ಷಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಭಗೀರಥ ಮಹರ್ಷಿಯ ಸಾಹಸಗಾಥೆಯು ನಿರ್ಣಯ, ಭಕ್ತಿ ಹಾಗೂ ಅಸಾಧ್ಯವಾದುದನ್ನು ಕಠಿಣ ಪ್ರಯತ್ನದ ಮೂಲಕ ಸಾಧ್ಯ ಮಾಡುವುದನ್ನು ತೋರಿಸಿಕೊಟ್ಟವರು. ಭಗೀರಥ ಮಹರ್ಷಿ ತನ್ನ ಘೋರ ತಪಸ್ಸಿನಿಂದ ಪವಿತ್ರ ಗಂಗೆಯನ್ನು ಭೂಮಿಗೆ ತಂದು ತನ್ನ ಹಿರಿಯರಿಗೆ ಜಲತರ್ಪಣ ಮಾಡಿದ ಭಗೀರಥ ಮಹರ್ಷಿ ಸಾಧನೆ ಅಸಾಮಾನ್ಯ, ಇದು ಪರಿಶ್ರಮ ಮತ್ತು ಕಠಿಣ ನಿರ್ಣಯಗಳ ಮೂಲಕ ಜಯ ಸಾಧಿಸಬಹುದೆಂಬ ಮುನ್ನುಡಿ ಬರೆದವರು ಭಗೀರಥ ಮಹರ್ಷಿಗಳು, ಸದಾ ಇವರ ಮಾರ್ಗದಲ್ಲಿ ನಡೆಯುವಂತಾಗಬೇಕೆಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷ ರಮೇಶ್ ಎಂ.ಸಿ, ತಾಲ್ಲೂಕು ಉಪ್ಪಾರ ಸಂಘದ ಅಧ್ಯಕ್ಷ ಗಿರೀಶ್ ಕೆ.ಬಿ, ಜಿಲ್ಲಾ ಉಪ್ಪಾರ ಯುವಕರ ಸಂಘದ ಅಧ್ಯಕ್ಷ ಲೋಕೇಶ್, ಪ್ರಧಾನ ಕಾರ್ಯದರ್ಶಿ ಮಾರುತಿ ಎಚ್.ಡಿ, ರಾಜ್ಯ ಭಗೀರಥ ನೌಕರರ ಸಂಘದ ಅಧ್ಯಕ್ಷ ಎನ್.ಎಸ್.ಚಂದ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಮಂಗಳನಾಯ್ಕ್ ಇತರರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ಸರಬರಾಜು ವ್ಯತ್ಯಯ

ಎಂ.ಸಿ.ಸಿ.ಬಿ ಎಫ್.2 ಫೀಡರ್ ವ್ಯಾಪ್ತಿಯ ಸಿದ್ದವೀರಪ್ಪ ಬಡಾವಣೆಯ 10, 11 ಮತ್ತು 12 ನೇ ಕ್ರಾಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯ ವ್ಯತ್ಯಯವಾಗಲಿದೆ.

# ದವನ್ - ನೂತನ ವಿದ್ಯಾಸಂಸ್ಥೆಯಿಂದ ಡೆವಲಪಿಂಗ್ ಎಂಪ್ಲಾಯಬಿಲಿಟಿ ವರ್ಕ್‌ಶಾಪ್



ದಾವಣಗೆರೆ, ಮೇ 14- ನಗರದ ದವನ್-ನೂತನ ವಿದ್ಯಾಸಂಸ್ಥೆ ವತಿಯಿಂದ 2024ರ ಅಂತಿಮ ವರ್ಷದ ಬಿ.ಕಾಂ., ಬಿಬಿಎ ವಿದ್ಯಾರ್ಥಿಗಳಿಗೆ ಉದ್ಯೋಗಿಗಳಾಗಲು, ಪೂರ್ವ ತಯಾರಿಯ ಸಲುವಾಗಿ ಈಚೆಗೆ ಡೆವಲಪಿಂಗ್ ಎಂಪ್ಲಾಯಬಿಲಿಟಿ ವರ್ಕ್‌ಶಾಪ್ ಏರ್ಪಡಿಸಲಾಗಿತ್ತು.

ವರ್ಕ್‌ಶಾಪ್‌ನ ನೇತೃತ್ವವನ್ನು ಸಂಸ್ಥೆಯ ಜಂಟಿ ಕಾರ್ಯದರ್ಶಿ ಹಾಗೂ ಪ್ರಾಚಾರ್ಯರಾದ ಡಾ. ಜಿ.ಎಸ್. ಅಂಜು ವಹಿಸಿದ್ದರು.

ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಕನ್ಸಲ್ಟೆಂಟ್ ಅಕಾಡೆಮಿಕ್ ಅಸೆಸ್‌ಮೆಂಟ್ ಮತ್ತು ಡೆವಲಪಿಂಗ್ ಎಂಪ್ಲಾಯಬಿಲಿಟಿ ಪುಸ್ತಕದ ಲೇಖಕರಾದ ಡಾ. ಆರ್.ಎಲ್. ನಂದೀಶ್ವರ ಉಪಸ್ಥಿತರಿದ್ದರು. ವರ್ಕ್‌ಶಾಪ್‌ನ ಬಗ್ಗೆ ವಿದ್ಯಾರ್ಥಿಗಳಾದ ಕು. ಅಂಬಿಕಾ ಮಾತನಾಡಿ, ನನ್ನ ವ್ಯಕ್ತಿತ್ವ ವಿಕಸನದ ಜೊತೆಗೆ ವೃತ್ತಿ ಜೀವನಕ್ಕೆ ನಾನೆಷ್ಟು ತಯಾರಾಗಬೇಕು ಎಂಬ ಅಂಶ ಇದರಿಂದ ತಿಳಿದಿದೆ ಎಂದರು.

ಮತ್ತೋರ್ವ ವಿದ್ಯಾರ್ಥಿ ಅರ್ಪಿತಾ, ಗಗನ್ ಮಾತನಾಡಿ, ಮೈ ಸ್ಟ್ರೆಂತ್ ಅಂಡ್ ಪ್ರೊಫೆಷನಲ್ ಫಾರ್ ಮೈ ಎಂಪ್ಲಾಯಬಿಲಿಟಿ ಅರಿಯಲು ಹಾಗೂ ಹ್ಯಾಬಿಟ್ಸ್ ಟೀಂ ವರ್ಕ್, ಟೈಂ ಮ್ಯಾನೇಜ್‌ಮೆಂಟ್ ಜೊತೆಗೆ ಅಪ್ಲಿಕೇಬಲ್ ಫಾರ್ ಡೆವಲಪಿಂಗ್, ಎಂಪ್ಲಾಯಬಿಲಿಟಿ ಸ್ಕಿಲ್ ಬಗ್ಗೆ ತಿಳಿಯುವಂತಾಯಿತು ಎಂದರು.

ಕು. ಗೌರಿ ಮಾತನಾಡಿ, ಮುಖ್ಯವಾಗಿ ಲರ್ನ್ ಅಂಡ್ ಪ್ರಾಕ್ಟೀಸ್‌ನ ಪ್ರೊಫೆಷನಲ್ ನಾಲೆಡ್ಜ್ ಅಂಡ್ ಸ್ಕಿಲ್ಸ್ ಟು ಹ್ಯಾವ್ ಎಡ್ಜ್ ಓವರ್ ಅದರ್ಸ್ ಫಾರ್ ಎಂಪ್ಲಾಯಬಿಲಿಟಿ ಬಗ್ಗೆ ತಿಳಿಯಲು ಸಹಕಾರ ನೀಡಿದ ಆಡಳಿತ ಮಂಡಳಿಗೆ ನಾನು ಕೃತಜ್ಞಳಾಗಿದ್ದೇನೆ ಎಂದರು.

## ಪ್ರಿಯಾಂಕ ಪುತ್ರಿ ಆಸ್ತಿ ಕುರಿತು ತಪ್ಪು ಹೇಳಿಕೆ

**ಪ್ರಕರಣ ದಾಖಲು**

ಶಿಮ್ಲಾ, ಮೇ 14 – ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಅವರ ಮಗಳು ಮಿರಾಯ ವಾದ್ರಾ ಆಸ್ತಿಯ ಕುರಿತು ತಪ್ಪು ಹಾಗೂ ಆಧಾರ ರಹಿತ ಹೇಳಿಕೆ ನೀಡಿದ ವ್ಯಕ್ತಿಯೊಬ್ಬರ ವಿರುದ್ಧ ಹಿಮಾಚಲ ಪ್ರದೇಶ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಶಿಮ್ಲಾದ ಅನೂಪ್ ವರ್ಮ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಕಾಂಗ್ರೆಸ್ ಸದಸ್ಯ ಪ್ರಮೋದ್ ಗುಪ್ತ ಎಂಬುವವರು ನೀಡಿದ ದೂರು ಆಧರಿಸಿ ಕ್ರಮ ತೆಗೆದುಕೊಳ್ಳಲಾಗಿದೆ. ಮಿರಾಯ ವಾದ್ರಾ ಆಸ್ತಿ 3 ಸಾವಿರ ಕೋಟಿ ರೂ. ಎಂದು ವ್ಯಕ್ತಿ ಟ್ವೀಟ್ ಮಾಡಿದ್ದಾರೆ. ಇದು ಪಕ್ಷದ ಬಗ್ಗೆ ಜನರಲ್ಲಿ ದ್ವೇಷ ಭಾವನೆ ಮೂಡಿಸುತ್ತದೆ ಎಂದು ದೂರಿನಲ್ಲಿ ಹೇಳಲಾಗಿದೆ.

## ಎಸ್ಸೆಸ್ಸೆಲ್ಸಿ ಐಸಿಎಸ್‌ಇಯಲ್ಲಿ ಸಿಹಿ ಸಂಕಾಳ್ ಅವರಿಗೆ ಶೇ. 99.07 ಫಲಿತಾಂಶ



ದಾವಣಗೆರೆ, ಮೇ 14- ಹುಬ್ಬಳ್ಳಿಯ ಪರಿವರ್ತನ್ ಗ್ರೂಪ್ ಆಫ್ ಸ್ಕೂಲ್‌ನಲ್ಲಿ ಅಧ್ಯಯನ ಮಾಡುತ್ತಿರುವ ನಗರದ ಸಿಹಿ ಸಂಕಾಳ್ ಎಸ್ಸೆಸ್ಸೆಲ್ಸಿ ಐಸಿಎಸ್‌ಇಯಲ್ಲಿ ಶೇ. 99.07 ಫಲಿತಾಂಶ ಪಡೆದಿದ್ದಾರೆ. ಸಿಹಿ, ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಜಿಲ್ಲಾಧ್ಯಕ್ಷ ಬಿ.ಎಂ. ಸದಾಶಿವಪ್ಪ ಅವರ ಮೊಮ್ಮಗಳು ಮತ್ತು ಸದಾಶಿವಪ್ಪನವರ ಪುತ್ರಿ ಡಾ. ಪ್ರೀತಿ ಹಾಗೂ ಅಳಿಯ ಡಾ. ರಾಜಶಂಕರ್ ದಂಪತಿ ಪುತ್ರಿ.

# ಎಸ್‌ಬಿಸಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪದವಿ ಪ್ರದಾನ



ದಾವಣಗೆರೆ, ಮೇ 14 - ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟ್ ವತಿಯಿಂದ ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು ಮತ್ತು ಅಥಣಿ ಸ್ನಾತಕೋತ್ತರ ಕೇಂದ್ರದಲ್ಲಿ ಕಾಲೇಜಿನ ಸಭಾಂಗಣದಲ್ಲಿ ಗ್ರಾಜ್ಯುಯೇಷನ್ ಡೇ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಅಧ್ಯಕ್ಷ ಬಿ.ಸಿ. ಉಮಾಪತಿ ಅಧ್ಯಕ್ಷತೆ ವಹಿಸಿದ್ದರು. ಕುಲಪತಿ ಪ್ರೊ. ಬಿ.ಡಿ. ಕುಂಬಾರ್ ಕಾರ್ಯಕ್ರಮ ಉದ್ಘಾಟಿಸಿದರು. ಸಮಾರಂಭದಲ್ಲಿ ಅಥಣಿ ಪ್ರಶಾಂತ್, ಆರ್. ವೆಂಕಟರೆಡ್ಡಿ, ಡಾ. ಕೆ. ಷಣ್ಮುಖ ಎಂ.ಸಿ. ಗುರು ಉಪಸ್ಥಿತರಿದ್ದರು.

## ಪ್ರಜ್ವಲ್ ಪ್ರಕರಣ ಎಸ್‌ಐಟಿ ದಾಳಿ

ಬೆಂಗಳೂರು, ಮೇ 14 – ಹಾಸನ ಸಂಸದ ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ), ಹಾಸನ ಜಿಲ್ಲೆಯಲ್ಲಿ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಹಲವು ದಾಳಿಗಳನ್ನು ನಡೆಸಿದೆ. ಬಿಜೆಪಿ ನಾಯಕರೊಬ್ಬರಿಗೆ ನಿಕಟವರ್ತಿಗಳಾಗಿರುವವರ ನಿವಾಸಗಳ ಮೇಲೆ ದಾಳಿ ನಡೆಸಲಾಗಿದೆ. ಪ್ರಕರಣದಲ್ಲಿ ವಿಡಿಯೋ ಸೋರಿಕೆಯಾದ ಮೂಲಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ.



**ಹೃತ್ಪೂರ್ವಕ ಶುಭಾಶಯಗಳು**



**ಮೋಕ್ಷ. ಎನ್.**

ಶ್ರೀ ತರಳಬಾಳು ಜಗದ್ಗುರು ಪ್ರೌಢಶಾಲೆ ಅನುಭವ ಮಂಟಪ ದಾವಣಗೆರೆ ವಿದ್ಯಾರ್ಥಿಯಾಗಿದ್ದು, 2023-24ನೇ ಸಾಲಿನ ಎಸ್ಎಸ್ಎಲ್‌ಸಿ ಸಿಬಿಎಸ್‌ಇ ಪರೀಕ್ಷೆಯಲ್ಲಿ 459 (92%) ಅಂಕಗಳನ್ನು ಗಳಿಸಿದ್ದು ಅವರಿಗೆ ಶುಭಾಶಯ ಕೋರುತ್ತಿರುವವರು :

ಅಜ್ಜಿ-ಅಜ್ಜಂದಿರು : ಶ್ರೀಮತಿ ಲತಾ, ಶ್ರೀ ಕೆಂಪನಹಳ್ಳಿ ಲಿಂಗೇಶ್ವರಪ್ಪ, ಬಸಾಪುರ. ಶ್ರೀಮತಿ ಜಯಮ್ಮ, ಜಿ.ಎಸ್ ರೇವಣಸಿದ್ದಪ್ಪ ಮಲ್ಲಶೆಟ್ಟಿಹಳ್ಳಿ.
ಅಮ್ಮ-ಅಪ್ಪ : ಶ್ರೀಮತಿ ಅನಿತಾ ಕೆ.ಎಲ್, ಶ್ರೀ ನಾಗರಾಜ್. ಆರ್. ಸಾನ್ವಿ .ಎನ್, ಸಿದ್ದಾರ್ಥ್ ಎನ್., ಮಲ್ಲಶೆಟ್ಟಿಹಳ್ಳಿ.
ಅಕ್ಕ-ಮಾಮ : ಶ್ರೀಮತಿ ಹರ್ಷಿತಾ, ಶ್ರೀ ಹರೀಶ್ ಕೆ.ಎಲ್, ಅಥರ್ವ ಕೆ.ಎಚ್. ಬಸಾಪುರ.
ಚಿಕ್ಕಮ್ಮ-ಚಿಕ್ಕಪ್ಪಂದಿರು : ಶ್ರೀಮತಿ ಶ್ವೇತ ಕೆ.ಎಲ್, ಶ್ರೀ ಮಂಜುನಾಥ್ ಎಚ್.ಎನ್, ಅದಿತಿ, ಮೌರ್ಯನ್. ಜಂಗಮ ತುಂಬಿಗೆರೆ. ಶ್ರೀಮತಿ ಶಿಲ್ಪ ಕೆ.ಎಲ್, ಮಲ್ಲಿಕಾರ್ಜುನ್ ವಿ.ಎಂ., ಆರ್ಯನ್, ಅರ್ವಿ. ಬೆಂಗಳೂರು. ಕೆಂಪನಹಳ್ಳಿ ವಂಶಸ್ಥರು ಬಸಾಪುರ.




## ರೈತರ ಬೆಳೆ ಪರಿಹಾರ ಬಿಡುಗಡೆ, ಸಹಾಯಕ್ಕೆ ಸಹಾಯವಾಣಿ

ದಾವಣಗೆರೆ, ಮೇ 14- 2023ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೀವ್ರ ಮಳೆ ಕೊರತೆಯಿಂದಾಗಿ ಜಿಲ್ಲೆಯಲ್ಲಿ ಬೆಳೆ ಹಾನಿ ಸಂಭವಿಸಿರುತ್ತದೆ. ರೈತರಿಗೆ ಬೆಳೆ ಪರಿಹಾರ ಬಿಡುಗಡೆ ಮಾಡಿದ್ದು, ರೈತರಿಗೆ ಪರಿಹಾರ ಬಾರದಿದ್ದಲ್ಲಿ ಮಾಹಿತಿ ನೀಡಲು ದಾವಣಗೆರೆ ಉಪವಿಭಾಗದ ಮಟ್ಟದಲ್ಲಿ ಸಹಾಯವಾಣಿ ಪ್ರಾರಂಭವಾಗಿದ್ದು, ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳ ರೈತರು ಬೆಳೆ ಪರಿಹಾರಕ್ಕೆ ಸಂಬಂಧಿಸಿದಂತೆ ಮಾಹಿತಿಗಾಗಿ ಸಂಖ್ಯೆ 08192-272955 ಗೆ ಕರೆ ಮಾಡಬಹುದು ಎಂದು ಉಪವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ ತಿಳಿಸಿದ್ದಾರೆ.

# ಆರೋಗ್ಯ ಕೇಂದ್ರಕ್ಕೆ ಮೂಲಭೂತ ಸೌಲಭ್ಯ ಕಲ್ಪಿಸಲು ಆಗ್ರಹ






ದಾವಣಗೆರೆ, ಮೇ 14 - ನಗರದ ಕೊಂಡಜ್ಜಿ ರಸ್ತೆ ಎಸ್.ಜೆ.ಎಂ. ನಗರದಲ್ಲಿರುವ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮೂಲಭೂತ ಸೌಲಭ್ಯ ಕಲ್ಪಿಸುವಂತೆ ಜಿಲ್ಲಾ ಜೆಡಿಎಸ್ ಮುಖಂಡ ಎಂ.ಎನ್. ನಾಗರಾಜ್ ಜಿಲ್ಲಾಡಳಿತವನ್ನು ಆಗ್ರಹಿಸಿದ್ದಾರೆ.

ಈ ಆರೋಗ್ಯ ಕೇಂದ್ರವು ಎಸ್.ಜೆ.ಎಂ. ನಗರ, ಎಸ್.ಎಂ.ಕೃಷ್ಣ ನಗರದ ಸುತ್ತಮುತ್ತಲಿನ ನಿವಾಸಿಗಳಿಗೆ ವರದಾನವಾಗಿದೆಯಾದರೂ, ಆ ಕೇಂದ್ರದಲ್ಲಿನ ಅವ್ಯವಸ್ಥೆಯಿಂದಾಗಿ ಜನರು ಚಿಕಿತ್ಸೆಗಾಗಿ ಪರದಾಡುತ್ತಿದ್ದು, ದೂರದ ಚಿಕಿತ್ಸಾ ಕೇಂದ್ರವನ್ನು ಅವಲಂಬಿಸುವಂತಾಗಿದೆ.

ಇಲ್ಲಿ ವೈದ್ಯರು ಒಬ್ಬರೇ ಇದ್ದಾರೆ, ಕನಿಷ್ಟ ಇಬ್ಬರು ವೈದ್ಯರು, ಅಗತ್ಯ ಸಿಬ್ಬಂದಿ ವರ್ಗದವರು ಬೇಕಾಗಿದ್ದಾರೆ. ಪ್ರತಿದಿನ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 12.30ರವರೆಗೆ ಮಾತ್ರ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿದ್ದು, ಇದನ್ನು ದಿನದ 24 ಗಂಟೆಯೂ ಸೇವೆ ಸಲ್ಲಿಸುವಂತಾಗಬೇಕು. ಕನಿಷ್ಟ 15 ರಿಂದ 20 ಹಾಸಿಗೆಯ ಆಸ್ಪತ್ರೆಯನ್ನಾಗಿಸಬೇಕು.

ಎಸ್.ಜೆ.ಎಂ. ನಗರದ ಸುತ್ತಮುತ್ತಲಿನಲ್ಲಿ ಜನಸಂಖ್ಯೆ ಹೆಚ್ಚುತ್ತಿದ್ದು, ಅವರಿಗೆ ತಕ್ಷಣವೇ ಚಿಕಿತ್ಸೆ ಸಿಗದ ಕಾರಣ ಸಾವು-ನೋವುಗಳು ಹೆಚ್ಚುತ್ತಿವೆ. ಈ ಭಾಗದಲ್ಲಿ ಪ್ರಮುಖ ಎರಡು ರಸ್ತೆಗಳಿದ್ದು, ಇಲ್ಲಿ ರಸ್ತೆ ಅಪಘಾತಗಳಾದ ಸಂದರ್ಭದಲ್ಲಿ ಪ್ರಾಥಮಿಕ ಚಿಕಿತ್ಸೆ ಸಿಗದೇ ದೂರದ ಆಸ್ಪತ್ರೆಗಳಿಗೆ ಹೋ ಗುವ ವೇಳೆಗೆ ಸಾವುಗ ಳಾಗಿರುವ ಅನೇಕ ಪ್ರಕರಣಗಳು ಘಟಿಸಿವೆ.

ಒಟ್ಟಿನಲ್ಲಿ ಈ ಆಸ್ಪತ್ರೆಯನ್ನು ಸುಸಜ್ಜಿತವನ್ನಾಗಿಸಿದ್ದಲ್ಲಿ ಇಲ್ಲಿನ ಜನರಿಗೆ ತುಂಬಾ ಅನುಕೂಲವಾಗುತ್ತದೆ. ಈ ಸಂಬಂಧ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ, ಮಹಾನಗರ ಪಾಲಿಕೆಗೆ ಅನೇಕ ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿರುವುದಿಲ್ಲ. ಜಿಲ್ಲಾಡಳಿತವು ತಕ್ಷಣವೇ ಗಮನ ಹರಿಸುವಂತೆ ಎಂ.ಎನ್. ನಾಗರಾಜ್ ಮನವಿ ಮಾಡಿದ್ದಾರೆ.

ಇದೇ ರೀತಿ ಹಳೇ ಊರಿನ ದೊಡ್ಡಪೇಟೆಯಲ್ಲಿ ಐನಳ್ಳಿ ಸರ್ಕಾರಿ ಪ್ರಾಥಮಿಕ ಕೇಂದ್ರ ಇದ್ದು ಈ ಆಸ್ಪತ್ರೆಯನ್ನೂ ಸುಸಜ್ಜಿತವಾಗಿಸಿದ್ದಲ್ಲಿ ಹಳೇ ಊರಿನ ಜನರು ದೂರದ ಆಸ್ಪತ್ರೆಗಳ ಆಶ್ರಯ ತಪ್ಪಿದಂತಾಗಿ, ತಕ್ಷಣ ಚಿಕಿತ್ಸೆ ದೊರೆತು ಆರೋಗ್ಯದಿಂದಿರಲು ಅನುಕೂಲವಾಗುತ್ತದೆ ಎಂದು ಅವರು ಕಳಕಳಿ ವ್ಯಕ್ತಪಡಿಸಿದ್ದಾರೆ.


**ದಾವಣಗೆರೆ ವಾಸಿ ಮಳಲಕೆರೆ ಶ್ರೀ ಡಾ|| ಕೆ.ಆರ್. ಸೋಮಶೇಖರಪ್ಪ ನಿಧನ**



ಜನನ : 20.10.1931, ಲಿಂಗೈಕ್ಯ : 14.05.2024
ದಾವಣಗೆರೆ ಸಿಟಿ ಎಂ.ಸಿ.ಸಿ. ಬಿ ಬ್ಲಾಕ್, 3ನೇ ಮೇನ್, 4ನೇ ಕ್ರಾಸ್, # 2748

**ಶ್ರೀ ಡಾ|| ಕೆ.ಆರ್. ಸೋಮಶೇಖರಪ್ಪ**

(93 ವರ್ಷ) ಅವರು ದಿನಾಂಕ 14.05.2024 ರಂದು ಮಂಗಳವಾರ ಬೆಳಿಗ್ಗೆ 8.35ಕ್ಕೆ ನಿಧನರಾಗಿದ್ದಾರೆ. ಮೂವರು ಪುತ್ರರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ದಿನಾಂಕ 15.05.2024 ರಂದು ಬುಧವಾರ ಮಧ್ಯಾಹ್ನ 1.00 ಗಂಟೆಗೆ, ಸ್ವಗ್ರಾಮ ಮಳಲಕೆರೆಯ ಸ್ವಂತ ತೋಟದಲ್ಲಿ (ರೈಸ್‌ಮಿಲ್ ಹತ್ತಿರ) ನೆರವೇರಲಿದೆ.

ವಿ.ಸೂ. : ಮೃತರ ಪಾರ್ಥಿವ ಶರೀರವನ್ನು ಬುಧವಾರ ಬೆಳಿಗ್ಗೆ 11.00 ಗಂಟೆಯವರೆಗೆ ಎಂಸಿಸಿ 'ಬಿ' ಬ್ಲಾಕ್‌ನ ಅವರ ನಿವಾಸದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇರಿಸಲಾಗುವುದು.

ಇಂತಿ ದುಃಖತಪ್ತರು :
ಶ್ರೀಮತಿ ರೇಖಾ ಮತ್ತು ಕೆ.ಎಸ್. ಸುರೇಶ್, ಇಂಜಿನಿಯರ್
ಶ್ರೀಮತಿ ಸವಿತಾ ಮತ್ತು ಡಾ|| ವಿಜಯ್‌ಕುಮಾರ್ ಎಸ್. ಕೂಲಂಬಿ
ಪ್ರೊಫೆಸರ್, ಕೀಲುಮೂಳೆ ವಿಭಾಗ, ಜೆಜೆಎಂ ಮೆಡಿಕಲ್ ಕಾಲೇಜ್, ದಾವಣಗೆರೆ.
ಶ್ರೀಮತಿ ಗಂಗಮ್ಮ ಮತ್ತು ಕೆ.ಎಸ್. ಸತೀಶ್
ಮೊಮ್ಮಗ : ಡಾ|| ಸಿದ್ದಾರ್ಥ, ಕೆ.ಎಸ್. ಮೊಮ್ಮಗಳು : ರಿಷಿಕಾ ಕೂಲಂಬಿ,
ಕೂಲಂಬಿ ವಂಶಸ್ಥರು, ಮಳಲೆಕೆರೆ ಗ್ರಾಮಸ್ಥರು ಮತ್ತು ಬಂಧು-ಮಿತ್ರರು.

ಮೊ.: 98457 29942, 94481 13460, 78990 07878



**ತೃತೀಯ ವರ್ಷದ ಪುಣ್ಯಸ್ಮರಣೆ**



**ದಿ|| ಶ್ರೀಯುತ ಎನ್.ಬಿ. ಹನುಮಂತಪ್ಪನವರು**
ವಿಶ್ರಾಂತ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹರಿಹರ
ನಿಧನ: 15.05.2021

ಉಸಿರು ಹೋದರೂ ಹೆಸರು ಉಳಿಸಿದ ನೀವು
ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ನಿಮ್ಮ ಸವಿ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಚ್ಚ ಹಸಿರಾಗಿದೆ.
ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು
ಪ್ರಾರ್ಥಿಸುವ, ಅನು ದಿನವೂ ನಿಮ್ಮ ಸ್ಮರಣೆಯಲ್ಲಿರುವ...

**ಶ್ರೀಮತಿ ವಿಜಯಲಕ್ಷ್ಮಿ ಹೆಚ್.,**
ಮಾಜಿ ಉಪಾಧ್ಯಕ್ಷರು, ನಗರಸಭೆ, ಹರಿಹರ
ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು,
ಸಹೋದರ, ಸಹೋದರಿಯರು ಮತ್ತು ಮೊಮ್ಮಕ್ಕಳು
ನೆಸ್ವಿ ವಂಶಸ್ಥರು, ರಾಜನಹಳ್ಳಿ,
ಕರೇ ಗೋವಿಂದಪ್ಪರ ವಂಶಸ್ಥರು,
ಹರಿಹರ ಹಾಗೂ ಬಂಧು-ಮಿತ್ರರು.


KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas